# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 253
Volume - 01 Issue - 253
ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269
Title- Code: KARKAN 28269
ಚಿತ್ರದುರ್ಗ
Chitradurga
ದಿನಾಂಕ: 27–04–2024 ಶನಿವಾರ
Date: 27-04-2024 Saturday
ಪುಟ: 4
Page: 4
ಬೆಲೆ : ರೂ.2–00
Price: Rs. 2-00

**ಒಳಪುಟದ ಸುದ್ದಿಗಳು**
ಮದುವೆ ಸಂಭ್ರಮದಲ್ಲೂ ಮತಚಲಾಯಿಸಿ, ಮತದಾನ ಮೌಲ್ಯ ಸಾರಿದ ನವದಂಪತಿ 2
ಹೊಸದುರ್ಗ ತಾಲೂಕಿನಲ್ಲಿ ಶೇ.73.97 ರಷ್ಟು ಮತದಾನ 3
ಬೆಳೆವಿಮೆ ಪರಿಹಾರ ತಾರತಮ್ಯ: ಮೇ3ಕ್ಕೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ 4

ಸುದ್ದಿ, ಜಾಹಿರಾತಿಗೆ 9686622252

**ಶುಭ ನುಡಿ**

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

## ಫಾಸ್ಟ್ ನ್ಯೂಸ್



ಚಳ್ಳಕೆರೆ ನಗರದ ಪಿಎಲ್‌ಡಿ ಬ್ಯಾಂಕ್‌ನ ಮತಗಟ್ಟೆ ಸಂಖ್ಯೆ 122ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಪತ್ನಿ ಹರ್ಷಿಣಿಯೊಂದಿಗೆ ಮತದಾನ ಮಾಡಿದರು.



ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕ ಟಿ. ರಘುಮೂರ್ತಿ, ಪತ್ನಿ ಗಾಯಿತ್ರಮ್ಮನೊಂದಿಗೆ ಕಡುಬನಕಟ್ಟೆಯಲ್ಲಿ ಮತದಾನ ಮಾಡಿದರು.



ಚಿತ್ರದುರ್ಗದ ನಗರ ಬಿ.ವಿ.ಕೆ.ಎಸ್ ಬಡಾವಣೆ ಭೀಮಸಮುದ್ರ ರಸ್ತೆ ಬರಗೇರಮ್ಮ ಶಾಲೆ ಭಾಗ– 144 ರಲ್ಲಿ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ನಗರಸಭೆ ಮಾಜಿ ಅಧ್ಯಕ್ಷ ಬಿ.ಕಾಂತರಾಜ್ ಅವರು ತಮ್ಮ ಮತ ಚಲಾಯಿಸಿದರು.




ಹೊಸದುರ್ಗ ವಿಧಾನ ಸಭಾ ಕ್ಷೇತ್ರದ ಕಾಂಗ್ರೇಸ್ ಶಾಸಕ ಬಿ.ಜಿ.ಗೋವಿಂದಪ್ಪ ಬೆಲಗೂರಿನಲ್ಲಿ ತಮ್ಮ ಮತ ಚಲಾಯಿಸಿದರು.



ಶಾಸಕ ಗೂಳಿಹಟ್ಟಿಶೇಖರ್ ತಾಲ್ಲೂಕಿನ ಗೂಳಿಹಟ್ಟಿಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

### ಚಿತ್ರದುರ್ಗ ಲೋಕಸಭಾ ಚುನಾವಣೆ

# ಶೇ.72.74ರಷ್ಟು ಮತದಾನ



**ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಶೇ.72.74 ದಾಖಲು**

| ವಿಧಾನಸಭಾ ಕ್ಷೇತ್ರವಾರು | ಮತದಾನ ವಿವರ |
|---|---|
| ಚಳ್ಳಕೆರೆ | 72.19%, |
| ಚಿತ್ರದುರ್ಗ | 70.42%, |
| ಹಿರಿಯೂರು | 71.49% , |
| ಹೊಳಲ್ಕೆರೆ | 73.48%, |
| ಹೊಸದುರ್ಗ | 73.97%, |
| ಮೊಳಕಾಲ್ಮೂರು | 75.71%, |
| ಪಾವಗಡ | 68.76%, |
| ಶಿರಾ | 75.70% |

## 2019ರ ಲೋಕಸಭಾ ಚುನಾವಣೆ ಮತದಾನದ ಮಾಹಿತಿ

2019ರ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಒಟ್ಟು 17,60,633 ಮತದಾರ ಪೈಕಿ 6,39,390 ಪುರುಷ ಮತದಾರ, 603639 ಮಹಿಳಾ ಮತದಾರರು ಹಾಗೂ 6 ಇತರೆ ಮತದಾರರು ಸೇರಿ ಒಟ್ಟು12,43,035 ಮತದಾರು ಇವಿಎಂ ಮೂಲಕ ಮತಚಲಾಯಿಸಿದ್ದರು. ಇದರೊಂದಿಗೆ 3471 ಅಂಚೆ ಮತಗಳು ಸೇರಿ ಒಟ್ಟು 12,46,506 ಜನರು ಮತದಾನ ಮಾಡಿದ್ದರು. ಮತದಾನ ಪ್ರಮಾಣ ಶೇ.70.8 ಆಗಿತ್ತು. 2024ರ ಲೋಕಸಭಾ ಕ್ಷೇತ್ರ ಚುನಾವಣೆಯಲ್ಲಿ 2019 ರ ಚುನಾವಣೆಗಿಂತಲೂ ಶೇಕಡಾವಾರು ಅಂದಾಜು ಶೇ.2 ರಷ್ಟು ಮತದಾನ ಪ್ರಮಾಣ ಹೆಚ್ಚಾಗಿದೆ.







» **ಚಿತ್ರದುರ್ಗ**

ಚಿತ್ರದುರ್ಗ (ಪ.ಜಾತಿ) ಲೋಕಸಭಾ ಕ್ಷೇತ್ರಕ್ಕೆ ಮತದಾನ ಪ್ರಕ್ರಿಯೆ ಶಾಂತಿ ಹಾಗೂ ಸುವ್ಯವಸ್ಥಿತವಾಗಿ ನಡೆದಿದ್ದು, ಸಂಜೆ 5ರ ವೇಳೆಗೆ ಅಂದಾಜು ಶೇ.67ರಷ್ಟು ಮತದಾನವಾಗಿದೆ.

ಬೆಳಿಗ್ಗೆ 7 ಗಂಟೆಗೆ ಮತದಾನ ಪ್ರಕ್ರಿಯೆ ಸುಗಮವಾಗಿ ಆರಂಭವಾಗುತ್ತಿದ್ದಂತೆ, ಮಹಿಳೆಯರು, ಪುರುಷರು, ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಇದೇ ಮೊದಲ ಬಾರಿಗೆ ಮತದಾನ ಮಾಡುವ ಯುವ ಮತದಾರರು ಉತ್ಸಾಹದಿಂದ ಬೆಳಗಿನ ತಂಪಾದ ವಾತಾವರಣದಲ್ಲಿ ಮತಗಟ್ಟೆಗೆ ಆಗಮಿಸಿ, ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು.

ಮತಗಟ್ಟೆಯಲ್ಲಿಬಿಸಿಲಿನಿಂದರಕ್ಷಣೆಗಾಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಿದ್ದು, ಬಿರು ಬಿಸಿಲಿನಿಂದ ರಕ್ಷಣೆಗಾಗಿ ಶಾಮಿಯಾನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಹಿರಿಯ ನಾಗರಿಕರಿಗೆ ಹಾಗೂ ವಿಕಲಚೇತನರಿಗೆ ವ್ಹೀಲ್ ಚೇರ್ ಹಾಗೂ ರ್‍ಯಾಂಪ್ ಸೌಲಭ್ಯ ಕಲ್ಪಿಸಲಾಗಿತ್ತು. ಮತಗಟ್ಟೆ ಕೇಂದ್ರಗಳಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು.

ಬೆಳಿಗ್ಗೆ 9ಕ್ಕೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸರಾಸರಿ ಮತದಾನ ಶೇ.7.33 ಮತದಾನದಾಖಲಾಯಿತು.ವಿಧಾನಸಭಾ ಕ್ಷೇತ್ರವಾರು ಚಳ್ಳಕೆರೆ ಶೇ.8.25, ಚಿತ್ರದುರ್ಗ ಶೇ.9.52, ಹಿರಿಯೂರು ಶೇ.7.61, ಹೊಳಲ್ಕೆರೆ ಶೇ.7.06, ಹೊಸದುರ್ಗ ಶೇ.5.37, ಮೊಳಕಾಲ್ಮುರು ಶೇ.10.28, ಪಾವಗಡ ಶೇ.6.42, ಶಿರಾ ಕ್ಷೇತ್ರದಲ್ಲಿ ಶೇ.6.33 ರಷ್ಟು ಮತದಾನವಾಯಿತು.

**ಬೆಳಗ್ಗೆ 11 ರವರೆಗೆ ಬಿರುಸಿನ ಮತದಾನ:** ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬೆಳಿಗ್ಗೆ 11ರವರೆಗೆ ಬಿರುಸಿನ ಮತದಾನ ದಾಖಲಾಯಿತು. ಲೋಕಸಭಾ ಕ್ಷೇತ್ರದ ಸರಾಸರಿ ಮತದಾನ ಶೇ.21.75ಕ್ಕೆ ಏರಿಕೆಯಾಯಿತು. ವಿಧಾನಸಭಾ ಕ್ಷೇತ್ರವಾರು ಚಳ್ಳಕೆರೆ ಶೇ.22.55, ಚಿತ್ರದುರ್ಗ ಶೇ.23.73, ಹಿರಿಯೂರು ಶೇ.20.79, ಹೊಳಲ್ಕೆರೆ ಶೇ.20.51, ಹೊಸದುರ್ಗ ಶೇ.17.89, ಮೊಳಕಾಲ್ಮುರು ಶೇ.26.77, ಪಾವಗಡ ಶೇ.20.51, ಶಿರಾ ಶೇ.19.90 ರಷ್ಟು ಮತದಾನವಾಗಿದ್ದು, ಮತದಾರರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಬಿರು ಬಿಸಿಲಿನ ನಡೆವೆಯೂ ಮತದಾರರು ಮತಗಟ್ಟೆಗೆ ಆಗಮಿಸಿ ಸಂತಸದಿಂದ ಮತ ಚಲಾಯಿಸಿದರು.

**ಬಿಸಿಲಾಘಾತಕ್ಕೂ ಕುಗ್ಗದ ಮತದಾನ:** ಮಧ್ಯಾಹ್ನ 1ಕ್ಕೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸರಾಸರಿ ಮತದಾನ ಶೇ.39.5 ರಷ್ಟು ಮತದಾನ ನಡೆಯಿತು. ಬಿಸಿಲಾಘಾತದ ನಡುವೆಯೂ ಕುಗ್ಗದೆ ಮತದಾರರು ಮತಗಟ್ಟೆಗೆ ಧಾವಿಸಿ, ತಮ್ಮ ಹಕ್ಕು ಚಲಾಯಿಸಿದರು. ಈ ವೇಳೆ ಚಳ್ಳಕೆರೆ ಕ್ಷೇತ್ರದಲ್ಲಿ ಶೇ.39.94, ಚಿತ್ರದುರ್ಗ ಶೇ.40.21, ಹಿರಿಯೂರು ಶೇ.37.58, ಹೊಳಲ್ಕೆರೆ ಶೇ.38.60, ಹೊಸದುರ್ಗ ಶೇ.36.21, ಮೊಳಕಾಲ್ಮುರು ಶೇ.44.28, ಪಾವಗಡ ಶೇ.36.47, ಶಿರಾ ಶೇ.37.85ರಷ್ಟು ಮತದಾನ ದಾಖಲಾಯಿತು. ಮಧ್ಯಾಹ್ನ 3ರ ವೇಳೆಗೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸರಾಸರಿ ಮತದಾನ ಶೇ.52.14 ರಷ್ಟು ಮತದಾನ ದಾಖಲಾಯಿತು. ಚಳ್ಳಕೆರೆ ಶೇ.52.72, ಚಿತ್ರದುರ್ಗ ಶೇ.51.68, ಹಿರಿಯೂರು ಶೇ.50.40, ಹೊಳಲ್ಕೆರೆ ಶೇ.53.34, ಹೊಸದುರ್ಗ ಶೇ.51.31, ಮೊಳಕಾಲ್ಮುರು ಶೇ.56.66, ಪಾವಗಡ ಶೇ.48.13, ಶಿರಾ ಶೇ.51.99 ಮತದಾನವಾಯಿತು.

**ಉತ್ಸಾಹ ತೋರಿದ ಮತದಾರರು:** ಸಂಜೆ 5 ರ ಹೊತ್ತಿಗೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸರಾಸರಿ ಮತದಾನ ಶೇ.67ರಷ್ಟು ಮತದಾನ ದಾಖಲಾಯಿತು. ಸಂಜೆ 6 ರವರೆಗೆ ಮತ ಚಲಾಯಿಸಲು ಅವಕಾಶವಿದ್ದು, ಮತದಾರರು ಉತ್ಸಾಹ ತೋರಿ ಮತ ಚಲಾಯಿಸುತ್ತಿರುವುದು ಮತಗಟ್ಟೆಗಳಲ್ಲಿ ಕಂಡುಬಂದಿತು. ವಿಧಾನಸಭಾ ಕ್ಷೇತ್ರವಾರು ಚಳ್ಳಕೆರೆ ಶೇ. 67.86, ಚಿತ್ರದುರ್ಗ ಶೇ.65.10, ಹಿರಿಯೂರು ಶೇ.65.96, ಹೊಳಲ್ಕೆರೆ ಶೇ.67.77, ಹೊಸದುರ್ಗ ಶೇ.65.42, ಮೊಳಕಾಲ್ಮುರು ಶೇ.70.96, ಪಾವಗಡ ಶೇ.63.98, ಶಿರಾ ಶೇ. 68.34ರಷ್ಟು ಮತದಾನವಾಗಿದೆ.

**ಆರೋಗ್ಯಸಿಬ್ಬಂದಿನೇಮಕ:**ಬಿಸಿಲಾಘಾತದ ಹಿನ್ನಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಆರೋಗ್ಯ ಇಲಾಖೆ ವತಿಯಿಂದ ಮತಗಟ್ಟೆಗಳಲ್ಲಿ ಅಗತ್ಯ ಔಷಧಗಳೊಂದಿಗೆ ಆರೋಗ್ಯ ಸಹಾಯಕಿಯರು ಹಾಗೂ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಲಾಗಿತ್ತು. ಹಿರಿಯ ನಾಗರಿಕರಿಗೆ ಸರತಿ ಸಾಲಿನಿಂದ ವಿನಾಯಿತಿ ನೀಡಿ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಯಿತು. ಪುಟ್ಟ ಮಕ್ಕಳೊಂದಿಗೆ ಮತಗಟ್ಟೆಗೆ ಆಗಮಿಸಿದ ತಾಯಂದಿರಿಗಾಗಿ ಹಾಲುಣಿಸಲು ಕೊಠಡಿಗಳನ್ನು ಕಾಯ್ದಿರಿಸಲಾಗಿತ್ತು.

## ಮೊದಲ ಮತದಾನ ಸಂಭ್ರಮದಲ್ಲಿ ಯುವ ಜನತೆ

ಲೋಕಸಭಾ ಕ್ಷೇತ್ರ ಚುನಾವಣೆಯಲ್ಲಿ ಮೊದಲ ಬಾರಿ ಮತ ಚಲಾಯಿಸಿ ಯುವ ಜನರು ಸಂಭ್ರಮಪಟ್ಟರು.

ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಕುರುಡಿಹಳ್ಳಿ ಗ್ರಾಮದ ಅನುಷಾ. ಹೆಚ್ ಮೊದಲ ಬಾರಿಗೆ ಮತ ಚಲಾಯಿಸಲು ಮತಗಟ್ಟೆ ಆಗಮಿಸಿದ್ದಳು.



ಚಳ್ಳಕೆರೆಯ ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯಾದ ಅನುಷಾ ಅಂಚೆ ಮೂಲಕ ತಲುಪಿದ ಮತದಾರ ಗುರುತಿನ ಚೀಟಿಯನ್ನ ಮತಗಟ್ಟೆ ಎದುರೇ ತೆರದು ಸಂಭ್ರಮಿಸಿದಳು. ಮೊದಲ ಬಾರಿಗೆ ಮತದಾನ ಮಾಡುತ್ತಿದ್ದೇನೆಂಬ ಖುಷಿ ಇದೆ. ಮತದಾನ ಮಾಡಲು ನಮ್ಮ ಕಾಲೇಜಿನಲ್ಲಿ ತಿಳಿ ಹೇಳಿದ್ದಾರೆ. ದೇಶದ ಪ್ರಜಾಪ್ರಭುತ್ವದಲ್ಲಿ ಭಾಗಿಯಾಗಿರುವುದು ಸಂತಸ ತಂದಿದೆ ಎಂದು ತನ್ನ ಅಭಿಪ್ರಾಯ ವ್ಯಕ್ತ ಪಡಿಸಿದಳು.



ಚಳ್ಳಕೆರೆ ನಗರದ ಗಾಂಧಿನಗರ ನಿವಾಸಿಯಾದ ಮಹಾಲಕ್ಷ್ಮೀ ಸರ್ಕಾರಿ ಪಿ.ಯು. ಕಾಲೇಜಿನಲ್ಲಿ ಮತ ಚಲಾಯಿಸಿ ಮತದಾನದ ಪ್ರಕ್ರಿಯೆಯ ಬಗ್ಗೆ ತುಂಬಾ ಕುತೂಹಲವಿದೆ. ದೇಶದ ಪ್ರಜಾಪ್ರಭುತ್ವವನ್ನು ಇನ್ನಷ್ಟು ಸದೃಢಗೊಳಿಸಲು, ನ್ಯಾಯ ಸಮ್ಮತವಾಗಿ ಯಾವುದೇ ರೀತಿಯ ಭಯ–ಭೀತಿ ಇಲ್ಲದೇ ದೇಶದ ಹಿತಕ್ಕಾಗಿ ನನ್ನ ಹಕ್ಕು ಚಲಾಯಿಸಿದ್ದೇನೆ. ಮುಂದೆಯೂ ಪ್ರತಿ ಚುನಾವಣೆಯಲ್ಲೂ ತಪ್ಪದೇ ಮತ ಚಲಾಯಿಸುವುದಾಗಿ ತಿಳಿಸಿದರು.

### ಪ್ರಮುಖ ಸುದ್ದಿ

## ಮತದಾನಕ್ಕೂ ಮುನ್ನ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿದ ಕಾರಜೋಳ

» **ಚಿತ್ರದುರ್ಗ**

ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಬಿಜೆಪಿ. ಅಭ್ಯರ್ಥಿ ಗೋವಿಂದ ಕಾರಜೋಳರವರು ಮತದಾನಕ್ಕೂ ಮುನ್ನ ಶುಕ್ರವಾರ ನಗರದ ಉಚ್ಚಂಗಿಯಲ್ಲಮ್ಮ ದೇವಸ್ಥಾನ, ಧರ್ಮಶಾಲಾ ರಸ್ತೆಯಲ್ಲಿರುವ ಸೀತಾರಾಮ ದೇವಸ್ಥಾನ, ನೀಲಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಮೂರು ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿ ಮಾತನಾಡಿದ ಗೋವಿಂದ ಕಾರಜೋಳ ನರೇಂದ್ರಮೋದಿ ಮತ್ತೊಮ್ಮೆ ದೇಶದ ಪ್ರಧಾನಿಯಾಗಬೇಕಾಗಿರುವುದರಿಂದ



ಈ ಚುನಾವಣೆ ಅತ್ಯಂತ ಮಹತ್ವದ್ದು, ಭಾರತವನ್ನು ವಿಶ್ವಗುರುವನ್ನಾಗಿಸುವಲ್ಲಿ ಶ್ರಮಿಸುತ್ತಿದ್ದಾರೆ. ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಭಾರತ ಐದನೆ ಸ್ಥಾನದಲ್ಲಿದ್ದು, ಇನ್ನು ಮೂರು ವರ್ಷಗಳಲ್ಲಿ ಮೂರನೆ ಸ್ಥಾನಕ್ಕೆ ಬರುವುದರಲ್ಲಿ ಸಂಶಯವಿಲ್ಲ. ಕಾಂಗ್ರೆಸ್ ಬಿಟ್ಟಿ ಭಾಗ್ಯಗಳನ್ನು ಕೊಟ್ಟು ರಾಜ್ಯದ ಜನರ ಮತ ಸೆಳೆಯುವ ಕುತಂತ್ರ ನಡೆಸುತ್ತಿದ್ದು, ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಇನ್ನು 25 ಭಾಗ್ಯಗಳನ್ನು ಕೊಡುವುದಾಗಿ ಮತದಾರರಿಗೆ ಆಸೆ ಹುಟ್ಟಿಸುತ್ತಿದೆ. ಪ್ರತಿ ವರ್ಷ ಒಬ್ಬ ಮಹಿಳೆಗೆ ಒಂದು ಲಕ್ಷ ರೂ.ಗಳನ್ನು ನೀಡುವುದಾಗಿ ಮರಳು ಮಾಡುತ್ತಿರುವ ಕಾಂಗ್ರೆಸ್ ಹಣ ಎಲ್ಲಿಂದ ತರುತ್ತದೆ. ಒಟ್ಟು ಐವತ್ತು ಲಕ್ಷ ಕೋಟಿ ರೂ.ಗಳಾಗುತ್ತದೆ. ನಮ್ಮ ದೇಶದ ಬಜೆಟ್ಟೆ ಅಷ್ಟೊಂದಿಲ್ಲ. ಆದ್ದರಿಂದ ಮತದಾರರು ಯೋಚಿಸಿ ಮತ ನೀಡಿ ಎಂದು ಮನವಿ ಮಾಡಿದರು.

ಬಿಜೆಪಿ. ಮಾಜಿ ಜಿಲ್ಲಾಧ್ಯಕ್ಷ ಟಿ.ಜಿ.ನರೇಂದ್ರನಾಥ್, ವಕ್ತಾರ ನಾಗರಾಜ್‌ಬೇದ್ರೆ, ಕಾರ್ಯದರ್ಶಿ ಶಂಭು ಇನ್ನು ಅನೇಕರು ಈ ಸಂದರ್ಭದಲ್ಲಿದ್ದರು.

**ಫಾಸ್ಟ್ ನ್ಯೂಸ್**

## ಮದುವೆ ಸಂಭ್ರಮದಲ್ಲೂ ಮತಚಲಾಯಿಸಿ, ಮತದಾನದ ಮೌಲ್ಯವನ್ನು ಸಾರಿದ ನವದಂಪತಿಗಳು



» **ಚಳ್ಳಕೆರೆ**

ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದು ನಡೆದ ಮತದಾನದಲ್ಲಿ ಅನೇಕ ವೈವಿಧ್ಯತೆಗಳನ್ನು ನಾವು ಕಾಣಬಹುದಾಗಿದೆ. ಸರ್ಕಾರ ಮತದಾನ ಮಾಡಬೇಕೆಂಬ ಉದ್ದೇಶದಿಂದ ಅಧಿಕೃತ ಸರ್ಕಾರಿ ರಜೆಯನ್ನು ಘೋಷಿಸಿದರು ಕೆಲವೊಮ್ಮೆ ಮತದಾನ ಮಾಡದೆ ದೂರವಿರುವವರ ಸಂಖ್ಯೆ ಹೆಚ್ಚು. ಇನ್ನೂ ಕೆಲವರು ಪ್ರಜಾಪ್ರಭುತ್ವದ ಮಹತ್ವವನ್ನು ಅರಿತಿದ್ದರೂ ಮತದಾನ ಮಾಡದೆ ನಿರ್ಲಕ್ಷ್ಯ ವಹಿಸಿ ರಜಾದ ಮಜಾ ಮಾಡುವುದು ಸಾಮಾನ್ಯ. ಚಳ್ಳಕೆರೆ ನಗರದ ಕಾಟಪ್ಪನಹಟ್ಟಿಯಮತಗಟ್ಟೆಸಂಖ್ಯೆ78ರಲ್ಲಿಮತದಾನದ ದಿನದಂದೇ ಮದುವೆಯಾದ ನವಜೋಡಿಯೊಂದು ವಿವಾಹ ಕಾರ್ಯದ ಜೊತೆಯಲ್ಲೇ ಮತದಾನ ಮಾಡುವ ಮೂಲಕ ಮತದಾನ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅಶೋಕ ಸ್ಪೋರ್ಟ್ಸ್ ಕ್ಲಬ್ ಸಂಸ್ಥಾಪಕ ನಾರಾಯಣಮೋಹಿತೆಯವರ ಪುತ್ರ, ದೈಹಿಕಶಿಕ್ಷಕ ಅಶೋಕ್‌ಮೋಹಿತೆ ಮತದಾನ ದಿನದಂದೇ ಮದುವೆಯಾಗಿ ಮದುವೆ ಶಾಸ್ತ್ರ ಮುಗಿಸಿಕೊಂಡು ಪತ್ನಿಯೊಂದಿಗೆ ಮತಗಟ್ಟೆಗೆ ಆಗಮಿಸಿ ಮತಚಲಾಯಿಸುವ ಮೂಲಕ ತನ್ನ ಮತದಾನದ ಮಹತ್ವವನ್ನು ಸಾರಿದ್ದಾನೆ. ಪತ್ನಿ ಸುಶ್ಮಿತಳೊಂದಿಗೆ ಆಗಮಿಸಿ ಮತಚಲಾಯಿಸಿದ್ದಾನೆ.

## ಅಮೇರಿಕಾದಿಂದ ಆಗಮಿಸಿ ಮತಚಲಾವಣೆ ಮಾಡಿದ ಅಖೀಲ್, ನಿಶ್ಚಿತಾ



» **ಚಳ್ಳಕೆರೆ**



ಚಳ್ಳಕೆರೆ ನಗರದ ಮತಗಟ್ಟೆ ಸಂಖ್ಯೆ 102ರಲ್ಲಿ ಆಮೇರಿಕಾದ ಯಾರ್ಲಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ಕಾರ್ಯನಿರ್ವಹಿಸುತ್ತಿರುವ ಜಿ.ಎಸ್.ಅಖೀಲ್ ತನ್ನ ತಂದೆ ಸುಧಾಕರ್, ತಾಯಿ ಲತಾ ಆಗಮಿಸಿ ಮತ ಚಲಾಯಿಸಿದರು. ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿರುವ ಎನ್.ಎನ್.ನಿಶ್ಚಿತಾ ಸಹ ತನ್ನ ತಂದೆ ಎಂ.ಎನ್.ನಾಗಭೂಷಣ್, ಎನ್.ಎಸ್.ಲತಾರೊಂದಿಗೆ ಮತಗಟ್ಟಗೆ ಆಗಮಿಸಿ ಮತದಾನ ಮಾಡಿದರು.



**ಹೊಸದುರ್ಗ ತಾಲೂಕಿನ ದೇವಪುರ ಮತಗಟ್ಟೆ ಸಂಖ್ಯೆ 54 ರಲ್ಲಿ ಶತಾಯುಷಿ (101) ರಾಮಜ್ಜ ಎಂಬುವವರು ವೀಲ್‌ಚೇರ್ ಸಹಾಯದಿಂದ ಮತಗಟ್ಟೆ ಬಂದು ತಮ್ಮ ಮತ ಚಲಾಯಿಸಿದರು.**



**ಹೊಸದುರ್ಗ ಪಟ್ಟಣದ ಡಾ:ಶಾಂತವೀರಸ್ವಾಮೀಜಿ ಹೊಸದುರ್ಗದಲ್ಲಿ ಮತ ಚಲಾಯಿಸಿದರು.**



**ಹೊಸದುರ್ಗ ತಾಲೂಕು ಬೆಲಗೂರು ಕ್ಷೇತ್ರದ ಶ್ರೀ ವಿಜಯ ಮಾರುತಿ ಶರ್ಮಸ್ವಾಮೀಜಿ ಬೆಲಗೂರಿನಲ್ಲಿ ಮತದಾನ ಮಾಡಿದರು.**

### ಮಠಾಧಿಶರು, ನವ ದಂಪತಿಗಳು, ಚುನಾಯಿತ ಪ್ರತಿನಿಧಿಗಳು, ಕೆಲವೆಡೆ ಬಹಿಷ್ಕಾರ

# ನಮ್ಮ ಮತದಾರರಿಂದ ಬಿರುಸಿನ ಮತದಾನ

» **ಚಿತ್ರದುರ್ಗ**

ಚಿತ್ರದುರ್ಗ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ಇಂದು ಬಿಸಿಲಾದರೂ ಸಹಾ ಬಿರುಸಿನಿಂದ ಮತದಾನ ನಡೆದಿದ್ದು, ಮಠಾಧೀಶರು, ನವ ದಂಪತಿಗಳು, ಚುನಾಯಿತ ಪ್ರತಿನಿಧಿಗಳು, ಇದ್ದಲ್ಲದೆ ಇದೇ ಪ್ರಥಮ ಬಾರಿಗೆ ಹಲವಾರು ಯುವ ಮತದಾರರ ಸಹಾ ಮತದಾನ ಕೇಂದ್ರಕ್ಕೆ ಆಗಮಿಸುವುದರ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ,

ಲೋಕಸಭಾ ಸಾರ್ವತ್ರಿಕ ಚುನಾವಣೆಯ 2ನೇ ಹಂತದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿಬಿರುಸಿನಮತದಾನದಾಖಲಾಗಿದೆ. ಮಧ್ಯಾಹ್ನ 1 ಗಂಟೆವರೆಗೆ ಶೇ 39.05 % ಮತದಾನ ನಡೆದಿದೆ. ಕೆಲವೆಡೆ ಮತದಾನ ಬಹಿಷ್ಕಾರ ಹಾಗೂ ಮತಯಂತ್ರಗಳು ಕೆಟ್ಟಿರುವುದನ್ನು ಹೊರತುಪಡಿಸಿ, ಬಿರು ಬಿಸಿಲಿನ ನಡುವೆಯೂ ಮತಾದಾದರು ಮತಗಟ್ಟೆಗಳಿಗೆ ಆಗಮಿಸಿ ಸಂತಸದಿಂದ ಮತಚಲಾಯಿಸುತ್ತಿದ್ದಾರೆ.

ವಿಧಾನ ಸಭಾ ಕ್ಷೇತ್ರವಾರು : ಚಳ್ಳಕೆರೆ– 39.94%, ಚಿತ್ರದುರ್ಗ– 40.21%, ಹಿರಿಯೂರು–37.58% , ಹೊಳಲ್ಕೆರೆ – 38.60%, ಹೊಸದುರ್ಗ– 36.21%, ಮೊಳಕಾಲ್ಮೂರು– 44.28%, ಪಾವಗಡ– 36.47%, ಶಿರಾ–37.85% ಮತದಾನವಾಗಿದ್ದು, ಮತದಾರರಿಂದ ಉತ್ತಮ ಸ್ಪಂದನೆ ದೊರಕಿದೆ.

ಈ ಬಾರಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಮತಗಟ್ಟೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಿದ್ದು ನೆರಳು, ಕುಡಿಯುವ ನೀರು ಆದ್ಯತೆ ವಹಿಸಿದೆ. ವಿಕಲಚೇತನರು ಹಾಗೂ ಹಿರಿಯರು ನಾಗರಿಕರ ಅನುಕೂಲಕ್ಕಾಗಿ ಗಾಲಿ ಕುರ್ಚಿಗಳು ಹಾಗೂ ಯಾರ್ಂಪ್ಗಳ ಮತಗಟ್ಟೆಯಲ್ಲಿ ಸೌಲಭ್ಯ ಕಲ್ಪಿಸಲಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದರಿಂದ ಜೆಡಿಎಸ್ ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸದೆ ಬಿಜೆಪಿಗೆ ಬೆಂಬಲಿಸಿದ್ದರಿಂದ ಬಿಜೆಪಿ ಹಾಗೂ ಕಾಂಗ್ರೇಸ್ ಅಭ್ಯರ್ಥಿ ಸೇರಿ ಚುನಾವಣೆ ಕಣದಲ್ಲಿ 18 ಪುರುಷ ಹಾಗೂ 2 ಮಹಿಳೆಯರು ಸೇರಿ 20 ಅಭ್ಯರ್ಥಿಗಳು ಇದ್ದು, ಇದರೊಂದಿಗೆ 1 ನೋಟಾ ಕೂಡ ಸೇರಿದೆ. ಹಾಗಾಗಿ ಮತಗಟ್ಟೆ ಸಿಬ್ಬಂದಿ 2 ಬ್ಯಾಲೆಟ್ ಯುನಿಟ್, ಒಂದು ಕಂಟ್ರೋಲ್ ಯುನಿಟ್ ಹಾಗೂ ಒಂದು ವಿವಿಪ್ಯಾಟ್ನು ಮತಗಟ್ಟೆಯಲ್ಲಿ ಇಡಲಾಗಿತ್ತು.

ಚಿತ್ರದುರ್ಗ ಲೋಕಸಭಾ ಕ್ಷೇತ್ರದ 8 ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 1856876 ಮತದಾರರು ಇದ್ದು, ಇವರಿಗಾಗಿ 2168 ಮತಗಟ್ಟೆಗಳನ್ನು ಜಿಲ್ಲಾಡಳಿತ ಸ್ಥಾಪಿಸಿತ್ತು. ಮತದಾನದ ಕಾರ್ಯಕ್ಕೆ 9904 ಅಧಿಕಾರಿ ಹಾಗೂ ಸಿಬ್ಬಂದಿ ನೇಮಕ ಮಾಡಲಾಗಿದೆ.

ಜಿಲ್ಲೆಯ 2168 ಮತಗಟ್ಟೆಗಳಿಗೆ 4336 ಬ್ಯಾಲೆಟ್ ಯುನಿಟ್, 2168 ಕಂಟ್ರೋಲ್ ಯುನಿಟ್ ಹಾಗೂ ವಿವಿಪ್ಯಾಟ್ಗಳು ಬಳಕೆ ಮಾಡಲಾಗಿದೆ. ಮುಂಜಾಗ್ರತವಾಗಿ 947 ಬ್ಯಾಲೆಟ್ ಯುನಿಟ್, 642 ಕಂಟ್ರೋಲ್ ಯುನಿಟ್ ಹಾಗೂ 745 ವಿವಿಪ್ಯಾಟ್ಗಳನ್ನು ಹೆಚ್ಚುವರಿವಾಗಿ ಮೀಸಲು ಇರಿಸಿ ಜಿಲ್ಲಾಡಳಿತ ಮತಧಾನಕ್ಕೆ ಯಾವುದೇ ತೊಂದರೆ ಆಗದಂತೆ ಎಚ್ಚರವಹಿಸಿದ್ದರು.

ಚಿತ್ರದುರ್ಗ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರನ್ನು ಆಕರ್ಷಿಸಲು 54 ವಿಶೇಷ ಮತಗಟ್ಟೆಗಳನ್ನು ಸ್ಥಾಪನೆ ಮಾಡಲಾಗಿತ್ತು. ಮಹಿಳಾ ಮತದಾರರನ್ನು ಉತ್ತೇಜಿಸಲು ಪ್ರತಿ ವಿಧಾನಸಭಾವಾರು ಮಹಿಳಾ ಮತದಾರರು ಹೆಚ್ಚಿರುವ 5 ಕಡೆ ಸಖಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು.

**ಮತದಾನ ಬಹಿಷ್ಕಾರ :** ಚಿತ್ರದುರ್ಗ ತಾಲೂಕಿನ ಸಿದ್ದಾಪುರ ಗ್ರಾಮಸ್ಥರು ಮತದಾನ ಬಹಿಷ್ಕಾರಕ್ಕೆ ನಿರ್ಧಾರ ಮಾಡಿದ್ದಾರೆ. ಬೆಳಿಗ್ಗೆ ಏಳು ಗಂಟೆಯಿಂದ ಮತದಾನ ಆರಂಭವಾದರೂ ಗ್ರಾಮಸ್ಥರು ಮತದಾನ ಮಾಡಲು ಮುಂದಾಗಿಲ್ಲ. ಗ್ರಾಮಸ್ಥರ ನಿರ್ಧಾರವು ಜಿಲ್ಲಾ ಸ್ವೀಪ್ ಸಮಿತಿಗೆ ತಲೆಬಿಸಿಯನ್ನು ತಂದಿಟ್ಟಿದೆ. ಗಣಿಭಾದಿತ ಪ್ರದೇಶ ಪಟ್ಟಿಯಿಂದ ಸಿದ್ದಾಪುರ ಗ್ರಾಮವನ್ನು ಕೈಬಿಟ್ಟಿದ್ದಕ್ಕೆ ಮತದಾನ ಮಾಡಲು ಹಿಂದೇಟು ಹಾಕಿದ್ದು, ನಮ್ಮ ಬೇಡಿಕೆ ಈಡೇರಿಸಿದರೆ ಮಾತ್ರ ಮತದಾನ ಮಾಡುತ್ತೇವೆ ಎಂದು ಗ್ರಾಮಸ್ಥರು ಪಟ್ಟು ಹಿಡಿದಿದ್ದಾರೆ. ಸಿದ್ದಾಪುರ ಗ್ರಾಮದ ಮತಗಟ್ಟೆ ಸಂಖ್ಯೆ 76ರಲ್ಲಿ ಈವರೆಗೆ ಮತದಾನ ಮಾಡದ ಗ್ರಾಮಸ್ಥರಿಗಾಗಿ ತಮ್ಮ ಹಕ್ಕು ಚಲಾಯಿಸುವಂತೆ ಅಧಿಕಾರಿಗಳು ಮನವಿ ಮಾಡಿದರೂ ಕೂಡ ಮತದಾರರು ಬಾರದೇ ಇರುವುದರಿಂದ ಸಿಬ್ಬಂದಿ ಮತಗಟ್ಟೆಯಲ್ಲಿ ಕಾದು ಕುಳಿತಿದ್ದಾರೆ.

ಯರೆಹಳ್ಳಿ ಗ್ರಾಮದಲ್ಲಿ ಮೊಬೈಲ್ ಟವರ್ ಸಮಸ್ಯೆ ನಿವಾರಿಸಬೇಕು ಎಂದು ಜನರು ಮತದಾನ ಬಹಿಷ್ಕಾರ ಮಾಡಿದ್ದಾರೆ. ಗ್ರಾಮದಲ್ಲಿ ಬಹುದಿನಗಳಿಂದ ಮೊಬೈಲ್ ಟವರ್ ಕೆಲಸ ಮಾಡುತ್ತಿಲ್ಲ. ದೂರವಾಣಿ ಕರೆ ಮಾಡಬೇಕು ಅಂದರೆ ದೂರದ ಎತ್ತರ ಪ್ರದೇಶಕ್ಕೆ ಹೋಗಬೇಕಿದೆ. ಈ ಬಗ್ಗೆ ಬಹಳಷ್ಟು ಸಾರಿ ದೂರು ನೀಡಿದ್ದರು. ಯಾವುದೇ ಪರಿಹಾರ ಆಗಿಲ್ಲ. ಆದ್ದರಿಂದ ಸಮಸ್ಯೆ ಬಗೆಹರಿಸುವವರೆಗೂ ಮತಾದಾನ ಮಾಡುವುದಿಲ್ಲ ಎಂದು ಜನರು ಪಟ್ಟು ಹಿಡಿದಿದ್ದರು.

**ಮತ ಚಲಾಯಿಸಿದ ನವ ದಂಪತಿ :** ಚಿತ್ರದುರ್ಗ ತಾಲ್ಲೂಕಿನ ವಿಜಾಪುರದ ಮತಗಟ್ಟೆ ಸಂಖ್ಯೆ 13ರಲ್ಲಿ ನವ ದಂಪತಿ ಮತದಾನ ಮಾಡಿದರು ವಿಜಾಪುರದ ಅರುಣ್ ಹಾಗೂ ಕಾವ್ಯ ಮತಚಲಾಯಿಸಿದ ನವದಂಪತಿಗಳು.

ಗುರು ಹಿರಿಯರ ನಿಶ್ಚಯದಂತೆ ಇಂದು ಮದುವೆ ದಿನವಾಗಿ ಗೊತ್ತುಪಡಿಸಿದ್ದರಿಂದ ಮಾಂಗಲ್ಯ ಧಾರಣೆ ಬಳಿಕ ಅರುಣ್ ಹಾಗೂ ಕಾವ್ಯ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿ, ನನ್ನ ಮತ ನನ್ನ ಹಕ್ಕು ಎಂಬ ಘೋಷ ವಾಕ್ಯ ಹೇಳಿದ ಅರುಣ್ ಹಾಗೂ ಕಾವ್ಯ ದೇಶದ ಅಭಿವೃದ್ಧಿಗೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾಗಿರುವುದು ನಮ್ಮ ಕರ್ತವ್ಯ ಹಾಗಾಗಿ ನಾವು ಮದುವೆ ಆದ ಬಳಿಕಾ ಮತ ಚಲಾಯಿಸಿದ್ದೆವೆ ಎಂದು ಹೇಳಿದರು.

**ಮಠಾಧೀಶರಿಂದ ಮತದಾನ :** ನಗರದ ಕಬೀರಾನಂದ ಬಡಾವಣೆಯಲ್ಲಿ 109 ಮತಗಟ್ಟೆಯಲ್ಲಿ ಕಬೀರಾನಂದಾಶ್ರಮದ ಪೀಠಾಧ್ಯಕ್ಷರಾಧ ಶ್ರೀ ಶಿವಲಿಂಗಾನಂದ ಶ್ರೀಗಳುಮತದಾನಮಾಡುವುದರಮೂಲಕ ತಮ್ಮ ಮತದ ಹಕ್ಕನ್ನು ಚಲಾಯಿಸಿದರು. ಚಿತ್ರದುರ್ಗ ಮಠದಹಟ್ಟಿ ಮತಗಟ್ಟೆ 5 ರಲ್ಲಿ ವಿವಿಧ ಮಠಾಧೀಶರು ಮತದಾನ ಮಾಡಿದರು. ಬಂಜಾರ ಗುರುಪೀಠದ ಸೇವಾಲಾಲ್ ಶ್ರೀ, ಮೇದಾರ ಗುರುಪೀಠದ ಕೇತೇಶ್ವರ ಶ್ರೀ, ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದರ ಚನ್ನಯ್ಯ ಶ್ರೀ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಯಾದವ ಗುರುಪೀಠದ ಕೃಷ್ಣಯಾದವಾನಂದ ಶ್ರೀ, ಕುಂಚಟಿಗ ಗುರುಪೀಠದ ಶಾಂತವೀರ ಶ್ರೀಗಳು ಮತದಾನ ಮಾಡಿದರು.

**ಚುನಾಯಿತ ಪ್ರತಿನಿಧಿಗಳಿಂದ ಮತದಾನ :** ಚಿತ್ರದುರ್ಗ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ಜಿಲ್ಲೆಯ ವಿವಿಧೆಡೆಗಳಲ್ಲಿ ಚುನಾಯುತ ಪ್ರತಿನಿಧಿಗಳು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

ಮಾಜಿ ಶಾಸಕರಾದ ಜಿ.ಎಚ್ .ತಿಪ್ಪಾರೆಡ್ಡಿಯವರು ತಮ್ಮ ಮಗನ ಸಮೇತ ಎ.ಪಿ.ಎಂ.ಸಿ ಆವರಣದಲ್ಲಿನ ಕೂಠಡಿ ಸಂಖ್ಯೆ 2ರಲ್ಲಿ ಮತದಾನ ಮಾಡಿದರು ಈ ಸಂದರ್ಭದಲ್ಲಿ ಅವರ ಪುತ್ರ ಡಾ.ಸಿದ್ಧಾರ್ಥ ಜೊತೆಯಲ್ಲಿದ್ದರು. ಇಂಡಿಯಾ ಅಭ್ಯರ್ಥಿ ಬಿ,ಎನ್.ಚಂದ್ರಪ್ಪರವರು ತಮ್ಮ ಕುಟುಂಬದ ಸಮೇತ ಬಿವಿಕೆ ಬಡಾವಣೆಯಲ್ಲಿನ ಬರಗೇರಮ್ಮ ಶಾಲೆಯಲ್ಲಿ ಮತದಾನ ಮಾಡಿದರು. ಮಾಜಿ ಸಚಿವರಾದ ಹೆಚ್ ಅಂಜನೇಯರವರು ಹೊಳಲ್ಕೆರೆಯಲ್ಲಿ ತಮ್ಮ ಪತ್ನಿ ಸಮೇತರಾಗಿ ತರಳಬಾಳು ಬಾಲಕಿಯರ ಪ್ರೌಢ ಶಾಲೆಯ ಬೂತ ಸಂಖ್ಯೆ 172ರಲ್ಲಿ ಮತದಾನ ಮಾಡಿದರು. ಶಾಸಕರಾದ ಎಂ.ಚಂದ್ರಪ್ಪರವರು ಚಿತ್ರದುರ್ಗ ನಗರದ ಪಟ್ಟದ ಪರಮೇಶ್ವರಿ ಶಾಲೆಯಲ್ಲಿ ಮತದಾನ ಮಾಡಿದರು. ಚಿತ್ರದುರ್ಗದ ನಗರ ಬಿ.ವಿ.ಕೆ.ಎಸ್ ಬಡಾವಣೆ ಭೀಮಸಮುದ್ರರಸ್ತೆ ಬರಗೇರಮ್ಮ ಶಾಲೆ ಭಾಗ 144 ರಲ್ಲಿ ನಗರಸಭೆ ಮಾಜಿ ಅಧ್ಯಕ್ಷರಾದ ಬಿ.ಕಾಂತರಾಜ್ ರವರು ಮತ ಚಲಾಯಿಸಿದರು.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಬ್ರಹ್ಮಪುರ(ದಗ್ಗೆ) ಗ್ರಾಮದ ಭೂತ್ ನಂ 192 ರ ಮತಗಟ್ಟೆಯಲ್ಲಿ ಚಂದ್ರಮೌಳಿ ಎಸ್ ಮೊದಲ ಬಾರಿಗೆ ಮತ ಚಲಾಯಿಸಿದರು.
















**ಚಿತ್ರದುರ್ಗ ನಗರದ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿರುವ ಸರ್ಕಾರಿ ಉರ್ದು ಶಾಲೆಯ ಮತಗಟ್ಟೆ 122 ರಲ್ಲಿ ಮತ ಚಲಾಯಿಸಿದ ನವ ಮತದಾರರ ಜೊತೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಬಿಜೆಪಿ. ಅಭ್ಯರ್ಥಿ ಗೋವಿಂದ ಕಾರಜೋಳರವರ ಪುತ್ರ ಬಿಜೆಪಿ. ಎಸ್ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ್‌ಕಾರಜೋಳ ಸೆಲ್ಫಿ ತೆಗೆಸಿಕೊಂಡು ಸಂಭ್ರಮಿಸಿದರು.**




**ಹೊಸದುರ್ಗ ತಾಲ್ಲೂಕು ದೇವಿಗೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಖಿ ಮತಗಟ್ಟೆ 38 ರಲ್ಲಿ ವಿಧಾನಪರಿಷತ್ ಸದಸ್ಯ ಕೆ. ಎಸ್.ನವೀನ್ ಲೋಕಸಭೆ ಚುನಾವಣೆಯಲ್ಲಿ ಶುಕ್ರವಾರ ಮತದಾನ ಮಾಡಿ ಶಾಹಿ ಬೆರಳನ್ನು ತೋರಿಸಿ ಖುಷಿ ಪಡುತ್ತಿರುವುದು.**



**ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ ನಗರದ ಜೋಗಿಮಟ್ಟಿ ರಸ್ತೆಯಲ್ಲಿರುವ ಪಟ್ಟದ ಪರಮೇಶ್ವರಿ ಶಾಲೆಯಲ್ಲಿ ಮತ ಚಲಾಯಿಸಿದರು.**

**ಪ್ರಮುಖ ಸುದ್ದಿ**

### ವಿವಿಧ ಮತಗಟ್ಟೆಗಳಲ್ಲಿ ಶಾಂತಿಯುತ ಮತದಾನ: ಉತ್ಸಾಹದಿಂದ ಮತದಾನದಲ್ಲಿ ಪಾಲ್ಗೊಂಡ ಯುವಕರು, ಮಹಿಳೆಯರು.

# ಚಳ್ಳಕೆರೆ ವ್ಯಾಪ್ತಿಯಲ್ಲಿ ಪ್ರಾರಂಭದಲ್ಲೇ ಬಿರುಸಿನ ಮತದಾನ

» **ಚಳ್ಳಕೆರೆ**

ಚಿತ್ರದುರ್ಗ ಲೋಕಸಭಾ ಚುನಾವಣೆ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ನಡೆದ ಮತದಾನ ಪ್ರಾರಂಭದಲ್ಲೇ ಚುರುಕುಗೊಂಡಿದ್ದು, ಮಧ್ಯಾಹ್ನ ಸಮಯದಲ್ಲಿ ಹೆಚ್ಚಿನ ಮತದಾರರು ಬಾರದೆ ಮಂದಗತಿಯಲ್ಲಿ ಸಾಗಿದ ಮತದಾನ ಸಂಜೆ 4ರ ನಂತರ ಚುರುಕುಗೊಂಡಿತು.

ಚಳ್ಳಕೆರೆ ವಿಧಾನಸಭಾ ವ್ಯಾಪ್ತಿಯ 260 ಮತಗಟ್ಟೆಗಳಲ್ಲಿ ಬೆಳಗ್ಗೆ 7ಗಂಟೆಯಿಂದ ಮತದಾನ ಪ್ರಕ್ರಿಯೆ ಆರಂಭವಾಯಿತು. ಗ್ರಾಮೀಣ ಭಾಗದಲ್ಲೂ ಸಹ ಮತದಾರರು ಮಧ್ಯಾಹ್ನ ಬಿಸಿಲಿಗೆ ಹೆದರಿ ಬೆಳಗ್ಗೆಯೇ ಮತಗಟ್ಟೆಗಳತ್ತ ಹೆಜ್ಜೆ ಹಾಕಿದರು. ವಿಶೇಷವಾಗಿ ಮಹಿಳೆಯರು, ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಲ್ಲಿ ಕಂಡುಬಂದರು. ಮೊದಲ ಬಾರಿಗೆ ಮತದಾನ ಮಾಡುವ ಅವಕಾಶ ಪಡೆದಿದ್ದ ಕೆಲ ಯುವಕರು ಮತದಾನ ಮಾಡಿದ ನಂತರ ಗೆಳೆಯರೊಂದಿಗೆ ತಮ್ಮ ಸಂತಸ ಹಂಚಿಕೊಂಡರು.

ನಗರದ ಚಿತ್ರದುರ್ಗ ರಸ್ತೆಯ ಬಿಇಒ ಕಚೇರಿ ಆವರಣದಲ್ಲಿರುವ ಸರ್ಕಾರಿ ಮಾದರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆ ಸಂಖ್ಯೆ 89 ಸಖಿ ಭೂತಾಗಿದ್ದು, ಚುನಾವಣೆಗೆ ನಿಯುಕ್ತಿಗೊಂಡ ಎಲ್ಲಾ ಮಹಿಳಾ ಸಿಬ್ಬಂದಿ ಪಿಂಕ್ ಸೀರೆಯಲ್ಲಿ ಕಂಡುಬಂದರು. ಹೆಚ್ಚಿನ ಸಂಖ್ಯೆಯ ಮಹಿಳೆಯರು ಬೆಳಗ್ಗಿನ ಸಮಯದಲ್ಲೇ ಸರಥಿ ಸಾಲಿನಲ್ಲಿ ನಿಂತು ತಮ್ಮ ಹಕ್ಕನ್ನು ಚಲಾಯಿಸಲು ಕಾದರು. ಗಾಂಧಿನಗರದ ಮತಗಟ್ಟೆ ಸಂಖ್ಯೆ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಜನತಾ ಕಾಲೋನಿಯಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರು ಕಂಡುಬಂದರು. ಮತ ಚಲಾಯಿಸಲು ಬಂದ ವೃದ್ದೆಗೆ ಅವರ ಮಗಳು ಸಹಕರಿಸಿ ಮತದಾನ ಮಾಡಿಸಿದರು. ಕಾಟಪ್ಪನಹಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆ ಸಂಖ್ಯೆ 78 ಪಿಂಕ್ ಭೂತ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ತಮ್ಮ ಹಕ್ಕು ಚಲಾಯಿಸಲು ಸಾಲಿನಲ್ಲಿ ನಿಂತಿದ್ದು ಕಂಡುಬಂತು. ಮತಗಟ್ಟೆ ಸಂಖ್ಯೆ 79ರಲ್ಲಿ ಹೆಚ್ಚಿನ ಸಂಖ್ಯೆಯ ಪುರುಷರೂ ಸರಥಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು.



ನಗರದ ಹಳೇಟೌನ್‌ನ ಮತಗಟ್ಟೆ ಸಂಖ್ಯೆ 118ರಲ್ಲಿ 741 ಮತದಾರರಿದ್ದು ಮತಚಲಾಯಿಸಲು ಸರಥಿ ಸಾಲಿನಲ್ಲಿ ನಿಂತ ಸಮಯದಲ್ಲೇ ಮತಯಂತ್ರ ಕೈಕೊಟ್ಟಿದ್ದು, ಸುಮಾರು 20 ನಿಮಿಷಗಳ ಕಾಲ ಮತದಾರರು ತಮ್ಮ ಹಕ್ಕು ಚಲಾಯಿಸಲು ಕಾದುಕುಳಿತರು ಸಂಬಂಧಪಟ್ಟ ತಾಂತ್ರಿಕಾಧಿಕಾರಿ ಆಗಮಿಸಿ ಮತಯಂತ್ರವನ್ನು ಬದಲಿಸಿದ ನಂತರ ಮತದಾನ ಸೂಸುತ್ರವಾಗಿ ನಡೆಯಿತು. ಜಿಲ್ಲಾ ಉಸ್ತುವಾರಿ ಸಚಿವ, ಹಿರಿಯೂರು ಕ್ಷೇತ್ರದ ಶಾಸಕ ಡಿ.ಸುಧಾಕರ ನಗರದ ಮತಗಟ್ಟೆ ಸಂಖ್ಯೆ 122ರಲ್ಲಿ ಪತ್ನಿ ಹರ್ಷಿಣಿಸುಧಾಕರ ಜೊತೆಗೆ ಆಗಮಿಸಿ ಮತದಾನ ಮಾಡಿದರು. ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ಕಡುಬನಕಟ್ಟೆಯ ಮತಗಟ್ಟೆ ಸಂಖ್ಯೆ–4 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಠಡಿ ಸಂಖ್ಯೆ ಒಂದರಲ್ಲಿ ಪತ್ನಿ ಗಾಯಿತ್ರಮ್ಮನೊಂದಿಗೆ ಆಗಮಿಸಿ ಮತ ಚಲಾಯಿಸಿದರು.

# ಕಾಂಗ್ರೆಸ್ ಜನಪರ ಆಡಳಿತಕ್ಕೆ ಜನ ಸಹಮತ

## ಬಿಜೆಪಿಗೆ ಮರ್ಮಘಾತ ಫಲಿತಾಂಶ ಖಚಿತ, ಕೈ ಹಿಡಿದಿದ್ದಾರೆ ಗೃಹಲಕ್ಷ್ಮಿಯರು, ಬಿ.ಎನ್.ಚಂದ್ರಪ್ಪ ಗೆಲುವು ನಿಶ್ಚಿತ; ಹೊಳಲ್ಕೆರೆಯಲ್ಲಿ ಮತಚಲಾಯಿಸಿದ ಎಚ್.ಆಂಜನೇಯ ಹೇಳಿಕೆ

» **ಹೊಳಲ್ಕೆರೆ**

ಮುಖ್ಯಮಂತ್ರಿಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಜನಪರ ಆಡಳಿತ ಇಡೀ ದೇಶಕ್ಕೆ ಮಾದರಿಯಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮರ್ಮಘಾತದ ಫಲಿತಾಂಶ ಬರಲಿದೆಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಪಟ್ಟಣದ ತರಳಬಾಳು ಬಾಲಕಿಯರ ಪ್ರೌಢಶಾಲೆಯ ಬೂತ್ ನಂಬರ್ 172 ರಲ್ಲಿ ಶುಕ್ರವಾರ ಮತ ಚಲಾಯಿಸಿದ ಬಳಿಕ ಮಾತನಾಡಿದರು. ಕನ್ನಡ ನಾಡಿನ ಜನ ಕೃತಜ್ಞತೆ ಗುಣದವರು. ಅದರಲ್ಲೂ ಗೃಹಲಕ್ಷ್ಮಿಯರು ಪಡೆದ ಫಲಕ್ಕೆ ಪ್ರತಿಯಾಗಿ ಕೃತಜ್ಞತೆ ತೋರುವ ವಿಶಾಲ ಹೃದಯವಂತರು. ಯಾವುದೇ ಮತಗಟ್ಟೆ ಬಳಿ ಜಮಾಯಿಸಿರುವ ಮಹಿಳೆಯರು ನಮ್ಮ ಮತ ಸಿದ್ದರಾಮಯ್ಯ ಅವರ ಪಕ್ಷ ಕಾಂಗ್ರೆಸ್ಸಿಗೆ ಎಂದು ಹಸ್ತ ತೋರಿಸಿ ಹೇಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಮೊದಲ ಹಂತದ ಚುನಾವಣೆಯಲ್ಲಿ ಎಲ್ಲ ಕ್ಷೇತ್ರದಲ್ಲಿ ಕಾಂಗ್ರೆಸ್ ಮುನ್ನಡೆ ಇದೆ ಎಂದು ಸಮೀಕ್ಷೆಗಳು ಹೇಳಿದ್ದು, ಇದೇ ಕಾರಣಕ್ಕೆ ಸೋಲುವ ಕ್ಷೇತ್ರದಲ್ಲಿ ಪ್ರಚಾರ ನಡೆಸಲು ಯೋಗಿ ಆದಿತ್ಯನಾಥ್ ಬರಲಿಲ್ಲ. ತುಮಕೂರಿಗೆ ಅಮಿತ್ ಶಾ ಕೂಡ ಬರಲೇ ಇಲ್ಲ.



ಈ ಎಲ್ಲ ಬೆಳವಣಿಗೆ ಗಮನಿಸಿದರೆ ಚುನಾವಣೆಗೆ ಮುನ್ನವೇ ಬಿಜೆಪಿ ದಕ್ಷಿಣ ಭಾರತದಲ್ಲಿ ಸೋಲು ಒಪ್ಪಿಕೊಂಡಿದೆ ಎಂದರು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಹಿಜಾಬ್, ಹಲಾಲ್‌ಕಟ್‌ಎಂದು ಹೇಳಿ ಹೀನಾಯ ಸೋಲುಅನುಭವಿಸಿದರುಬುದ್ಧಿಕಲಿಯದೇ ಲೋಕಸಭಾ ಚುನಾವಣೆಯಲ್ಲೂ ಅದೇ ದ್ವೇಷದ ಭಾವನೆ ಪ್ರಸ್ತಾಪಿಸಿದ್ದಾರೆ. ಬಸವಣ್ಣನ ನಾಡಿನ ಜನರು, ಇಂತಹ ಜಾತಿ-ಧರ್ಮದ ಮಧ್ಯೆ ವಿಷ ಬೀಜ ಬಿತ್ತುವುದನ್ನು ಸಹಿಸುವುದಿಲ್ಲ. ಈ ಕಾರಣಕ್ಕೆ ಬಿಜೆಪಿ ನಾಯಕರಿಗೆ ಈ ಭಾರೀ ಮರ್ಮಘಾತ ಫಲಿತಾಂಶವನ್ನು ಜನ ನೀಡಲಿದ್ದಾರೆ ಎಂದು ಹೇಳಿದರು.

ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಅವರ ಪರವಾಗಿ ಜಿಲ್ಲಾ ಮಂತ್ರಿ ಹಾಗೂ ಆರು ಮಂದಿ ಶಾಸಕರ ನೇತೃತ್ವದಲ್ಲಿ ಚುನಾವಣೆ ಎದುರಿಸಲಾಗಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ಭಾರಿ, ದೇಶದ ಜನರ ಅಚ್ಚುಮೆಚ್ಚಿನ ನಾಯಕಿ ಪ್ರಿಯಾಂಕಾ ಗಾಂಧಿ, ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದಾರೆ. ಜೊತೆಗೆ ಬಿಜೆಪಿಯ ಸಪ್ಪೆ ಪ್ರಚಾರ, ಕಾರಜೋಳ ಅವರ ಕಾಟಾಚಾರದ ಸ್ಪರ್ಧೆ ಪರಿಣಾಮ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಎರಡೂವರೆ ಲಕ್ಷಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ದಾಖಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಟಿಕೆಟ್‌ಗೆ 25 ಮಂದಿ ಅರ್ಜಿ ಸಲ್ಲಿಸಿದ್ದರು. ಟಿಕೆಟ್ ಘೋಷಣೆ ಬಳಿಕ ಅವರೆಲ್ಲರೂ ಪಕ್ಷದ ಅಭ್ಯರ್ಥಿ ಬಿ.ಎನ್. ಚಂದ್ರಪ್ಪ ಅವರ ಗೆಲುವಿಗೆ ಟೊಂಕ ಕಟ್ಟಿ ನಿಂತು ಶ್ರಮಿಸಿದ್ದಾರೆ. ಸರಳ, ಸಜ್ಜನಿಕೆಯ ಚಂದ್ರಪ್ಪ ಕುರಿತು ಜಿಲ್ಲೆಯ ಜನರಲ್ಲಿ ಅಭಿಮಾನ ಇದ್ದು, ಅವರ ಗೆಲುವು ನಿಶ್ಚಿತವಾಗಿದ್ದು ಘೋಷಣೆಯಷ್ಟೇ ಬಾಕಿ ಉಳಿದಿದೆ ಎಂದು ಹೇಳಿದರು.

### ಬಿಜೆಪಿ ಕುಟುಂಬದ ಮತ ಹಸ್ತಕ್ಕೆ

ರಾಜ್ಯದ ಯಾವುದೇ ಮನೆಗೆ ಎಡತಾಕಿದರು ಒಬ್ಬರಲ್ಲ ಒಬ್ಬರು ಐದು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಸಿಗುತ್ತಾರೆ. ಅಷ್ಟೇ ಏಕೆ ಬಿಜೆಪಿಯ ಬಹಳಷ್ಟು ಕಾರ್ಯಕರ್ತರು, ಮುಖಂಡರ ಮನೆಯಲ್ಲೂ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಯ ಫಲಾನುಭವಿಗಳು ಇದ್ದಾರೆ. ಅವರೆಲ್ಲರೂ ಸಿದ್ದರಾಮಯ್ಯ ಅವರನ್ನು ಬಹಳ ಅಭಿಮಾನ ಪಡುತ್ತಾರೆ. ಅವರೆಲ್ಲರೂ ಮನೆಯಲ್ಲಿನ ಗಂಡಸರಿಗೆ ಗೊತ್ತಾಗದ ರೀತಿ ಕಾಂಗ್ರೆಸ್ಸಿಗೆ ಮತ ಚಲಾಯಿಸಿದ್ದಾರೆ ಎಂದರು.ನಾವು ಸ್ವಾಭಿಮಾನದ ಬದುಕು ನಡೆಸಲು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಕಾರಣವಾಗಿದ್ದು, ಕೇಂದ್ರದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೇ ಬಡ, ಮಧ್ಯಮ ವರ್ಗದ ಜನರ ಬದುಕು ಉತ್ತಮಗೊಳ್ಳಲಿದೆ. ಪ್ರತಿ ಕುಟುಂಬದ ಯಜಮಾನಿ ಬ್ಯಾಂಕ್ ಖಾತೆಗೆ ವರ್ಷಕ್ಕೆ ಒಂದು ಲಕ್ಷ ರೂಪಾಯಿ ಸಿಗಲಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವುದು ನಮ್ಮ ಜವಾಬ್ದಾರಿ ಎಂದು ಗೃಹಲಕ್ಷ್ಮಿಯರ ಮಾತುಗಳು ನಮ್ಮಲ್ಲಿ ಹೆಚ್ಚು ಆತ್ಮವಿಶ್ವಾಸ ಮೂಡಿಸಿದ್ದರೆ, ಬಿಜೆಪಿಯವರಲ್ಲಿ ನಡುಕ ಉಂಟು ಮಾಡಿದೆ ಎಂದು ಎಚ್. ಆಂಜನೇಯ ಹೇಳಿದರು.

## ಫಾಸ್ಟ್ ನ್ಯೂಸ್

### ಮತಗಟ್ಟೆ ಅಧಿಕಾರಿ ಯಶೋಧಮ್ಮ ನಿಧನ

» **ಚಿತ್ರದುರ್ಗ**



ಮತಗಟ್ಟೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಅಧಿಕಾರಿ ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ಮೇಗಳ ಗೊಲ್ಲರಹಟ್ಟಿಯಲ್ಲಿ ನಡೆದಿದೆ.ಮತಗಟ್ಟೆ ಅಧಿಕಾರಿ ಯಶೋಧಮ್ಮ (58) ಮೃತಪಟ್ಟಿರುವ ಮಹಿಳೆ. ಚಳ್ಳಕೆರೆ ತಾಲೂಕಿನ ಬೊಮ್ಮಸಂದ್ರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವವಹಿಸುತ್ತಿದ್ದ ಮೃತ ಶಿಕ್ಷಕಿ ಯಶೋದಮ್ಮ ಅವರನ್ನು ಲೋಕಸಭಾ ಚುನಾವಣೆ ನಿಮಿತ್ತ ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ ಗ್ರಾಮದ ಮೇಗಳ ಗೊಲ್ಲರಹಟ್ಟಿಯಲ್ಲಿ ಮತಗಟ್ಟೆ ಆಧಿಕಾರಿ ಚುನಾವಣೆ ಅಧಿಕಾರಿಗಳು ನೇಮಿಸಿದ್ದರು.ಇಂದು ಬೆಳಗ್ಗೆಯಿಂದಲೇ ಸುಸ್ತು ಎಂದು ಯಶೋದಮ್ಮ ಬಳಲುತ್ತಿದ್ದು, ಅದರಲ್ಲೇ ಮತಗಟ್ಟೆಗೆ ಬಂದು ಕರ್ತವ್ಯಕ್ಕೆ ಹಾಜರಾಗಿದ್ದರು. ಮಧ್ಯಾಹ್ನ 12 ಗಂಟೆ ಸುಮಾರಿಗೆ ಲೋ ಬಿಪಿಯಾಗಿ ತೀವ್ರ ಅಸ್ವಸ್ಥರಾದ ಯಶೋದಮ್ಮ ಅವರನ್ನು ಚಳ್ಳಕೆರೆ ಆಸ್ಪತ್ರೆಗೆ ಕರೆತರುವಷ್ಟರಲ್ಲಿ ಯಶೋಧಮ್ಮ ಸಾವನ್ನಪ್ಪಿದ್ದಾರೆ. ಚಳ್ಳಕೆರೆಆಸ್ಪತ್ರೆಗೆಅಪರಜಿಲ್ಲಾಧಿಕಾರಿಕುಮಾರಸ್ವಾಮಿ ಭೇಟಿ ನೀಡಿದ್ದಾರೆ. ಈ ಬಗ್ಗೆ ಚಳ್ಳಕೆರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

### ಇವತ್ತು ಮತವನ್ನು ಮಾರುವ, ಕೊಳ್ಳುವ ವ್ಯಾಪಾರ ಎಲ್ಲ ಕಡೆ ನಡೆಯುವಂಥದ್ದು ತುಂಬಾ ವಿಷಾದನೀಯ



» **ಹೊಸದುರ್ಗ**

ಮತ ಮಾರಿಕೊಳ್ಳುವುದಾಗಲಿ, ಕೊಂಡುಕೊಳ್ಳುವುದಾಗಲಿಅಲ್ಲ.ಇವತ್ತುಮತವನ್ನುಮಾರುವ,ಕೊಳ್ಳುವ ವ್ಯಾಪಾರ ಎಲ್ಲ ಕಡೆ ನಡೆಯುವಂಥದ್ದು ತುಂಬಾ ವಿಷಾದನೀಯ ಇದನ್ನು ಹೋಗಲಾಡಿಸಬೇಕೆಂದರೆ ಮತದಾರರು ಜಾಗೃತರಾಗಬೇಕು. ಅಂತಹ ಜಾಗೃತ ಮತದಾರರಿಂದ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಲಿಕ್ಕೆ ಸಾಧ್ಯ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಿಸಿದರು. ತಾಲೂಕಿನ ಸಾಣೇಹಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಲೋಕಸಭಾ ಚುನಾವಣೆ ಮತ ಚಲಾಯಿಸಿ ನಂತರ ಮಾತನಾಡಿದರು. ಪ್ರಜಾಪ್ರಭುತ್ವ ಅರ್ಹ ಮತದಾರರನ್ನು ಅವಲಂಬಿಸಿದೆ. ಮತದಾರರು ಯಾವುದೇ ಆಸೆ ಆಮಿಷೆಗಳಿಗೆ ಬಲಿಯಾಗದೇ, ಯಾವುದೇ ಪಕ್ಷ ಪಂಗಡಗಳಿಗೆ ಒಳಗಾಗದೆ ಜಾತಿ, ಮತ ನೋಡದೇ ಇದ್ದದ್ದರಲ್ಲೇ ಅರ್ಹ ವ್ಯಕ್ತಿಗಳಿಗೆ ನಿಮ್ಮ ಮತವನ್ನು ಮುಫತ್ತಾಗಿ ಕೊಡಬೇಕು ಎಂದರು.

### ನಗರದಲ್ಲಿ ಮೊದಲ ಮತ ಹಾಕಿದ ಭೂಮಿಕ

» **ಚಿತ್ರದುರ್ಗ**



ಇಂದು ನಡೆದ ಚಿತ್ರದುರ್ಗ ಲೋಕಸಭಾ ಚುನಾವಣೆಯಲ್ಲಿ ಇದೇ ಪ್ರಥಮ ಬಾರಿಗೆ ಮತವನ್ನು ಮತಗಟ್ಟೆ 121ರಲ್ಲಿ ಮತವನ್ನು ಚಲಾಯಿಸಿದ ಪಿ.ಎಸ್.ಭೂಮಿಕರವರು ಮತದಾನ ಎನ್ನುವುದು ಒಂದು ಪವಿತ್ರವಾದ ಕಾರ್ಯವಾಗಿದೆ. ಇದರಲ್ಲಿ ಎಲ್ಲರು ಸಹಾ ಭಾಗಿಯಾಗಬೇಕಿದೆ. ಮತದಾನ ನಮ್ಮ ಹಕ್ಕು ಇದನ್ನು ಯಾವುದಕ್ಕೂ ಮಾರಾಟ ಮಾಡಬಾರದು ದಾನ ಮಾಡಬೇಕಿದೆ ಎಂದರು.

### ವಿದ್ಯುತ್ ವ್ಯತ್ಯಯ

» **ದಾವಣಗೆರೆ**

ಮಹಾನಗರ ಪಾಲಿಕೆ ವತಿಯಿಂದ ಸಿ.ಸಿ. ರಸ್ತೆ ಹಾಗೂ ಒಳಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಏಪ್ರಿಲ್ 27 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಎಮ್.ಸಿ.ಸಿ.ಬಿ ಎಫ್2 ಫೀಡರ್ ವ್ಯಾಪ್ತಿಯ ಸಿದ್ದವೀರಪ್ಪ ಬಡಾವಣೆಯ 10ನೇ, 11ನೇ & 12ನೇ ಕ್ರಾಸ್‌ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ಸುಡು ಬಿಸಿಲನ್ನು ಲೆಕ್ಕಿಸದೆ ಸರದಿ ಸಾಲಿನಲ್ಲಿ ನಿಂತು ಮತದಾನ

# ಹೊಸದುರ್ಗ: ಶೇ.73.97 ರಷ್ಟು ಮತದಾನ

» **ಹೊಸದುರ್ಗ**

ಹೊಸದುರ್ಗ ತಾಲೂಕಿನಾದ್ಯಂತ ಒಟ್ಟು 242 ಮತಗಟ್ಟೆ ಕೇಂದ್ರಗಳಲ್ಲಿ ಸುಗಮವಾಗಿ ಮತದಾನ ನಡೆದಿದ್ದು ಕೆಲವು ಕಡೆ ತಾಂತ್ರಿಕ ಸಮಸ್ಯೆ ಎದುರಾಗಿದ್ದು ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಗಮನ ಅರಿಸಿ ಸಮಸ್ಯೆ ಬಗೆಹರಿಸಿದರು.

ಮುಂಜಾನೆ 7 ಗಂಟೆಯಿಂದಲೇ ಮತದಾನ ಆರಂಭವಾಯಿತು.ಸಂಜೆ 5 ಗಂಟೆಯ ಸಮಯಕ್ಕೆ ಶೇ.65.42 ರಷ್ಟು ಮತದಾನ ನಡೆದಿದೆ.

ತಾಲ್ಲೂಕಿನಾದ್ಯಂತ ಮುಂಜಾನೆಯಿಂದ ಸಂಜೆಯವರೆಗೂ ಶಾಂತಿಯುತ ಮತದಾನವಾದ ಬಗ್ಗೆ ವರದಿಯಾಗಿದ್ದು ಮತದಾನದ ಸಂಧರ್ಬದಲ್ಲಿ ಎಲ್ಲಿಯೂ ಯಾವುದೇ ರೀತಿಯ ಅಹಿತಕರ ಘಟನೆಗಳು ವರದಿಯಾಗಿಲ್ಲ, ಎಲ್ಲಾ ಮತಗಟ್ಟೆಗಳಲ್ಲಿ ಸಿಪಿಐ ತಿಮ್ಮಣ್ಣ ಅವರ ನೇತೃತ್ವದಲ್ಲಿ ಬಿಗಿ ಪೋಲೀಸ್ ಬಂದೂಬಸ್ತ್ ಮಾಡಲಾಗಿತ್ತು.



ಬೆಳಿಗ್ಗೆ ಮಂದಗತಿಯಲ್ಲಿ ಆರಂಭಗೊಂಡ ಮತದಾನ ಸುಡುಬಿಸಿಲಿನಲ್ಲೂ ಮಧ್ಯಾಹ್ನದ ವೇಳೆಗೆ ಚುರಕುಗೊಂಡು ಸಂಜೆ ಹೊತ್ತಿಗೆ ಬಿರುಸಾಯಿತು. ಡಾ:ಪುರುಷೋತ್ತಮಾನಂದಪುರಿಸ್ವಾಮೀಜಿ ಬಿ.ವಿ.ನಗರದಲ್ಲಿ, ಶ್ರೀ ಈಶ್ವರಾನಂದಪುರಿಸ್ವಾಮೀಜಿ ಕೆಲ್ಲೋಡಿನಲ್ಲಿ, ಡಾ:ಶಾಂತವೀರಸ್ವಾಮೀಜಿ ಹೊಸದುರ್ಗದಲ್ಲಿ ಡಾ;ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾಣೇಹಳ್ಳಿಯಲ್ಲಿ, ಶ್ರೀ ವಿಜಯ ಮಾರುತಿ ಶರ್ಮಸ್ವಾಮೀಜಿ ಬೆಲಗೂರಿನಲ್ಲಿ ಮತದಾನ ಮಾಡಿದರು.

ಶಾಸಕ ಬಿ.ಜಿ.ಗೋವಿಂದಪ್ಪ ಬೆಲಗೂರಿನಲ್ಲಿ, ಮಾಜಿ ಶಾಸಕ ಗೂಳಿಹಟ್ಟಿಶೇಖರ್ ಗೂಳಿಹಟ್ಟಿಯಲ್ಲಿ, ಮಾಜಿ ಶಾಸಕರಾದ ಇಲ್ಕಲ್‌ವಿಜಯಕುಮಾರ್ ಹಾಗೂ ಟಿ.ಹೆಚ್.ಬಸವರಾಜ್ ಹೊಸದುರ್ಗದಲ್ಲಿ ಮತಚಲಾಯಿಸಿದರು.

ತಾಲೂಕಿನ ದೇವಪುರ ಮತಗಟ್ಟೆ ಸಂಖ್ಯೆ 54 ರಲ್ಲಿ ಶತಾಯುಷಿ (101) ರಾಮಜ್ಜ ಎಂಬುವವರ ವೀಲ್‌ಚೇರ್ ಸಹಾಯದಿಂದ ಮತಗಟ್ಟೆ ಬಂದು ತಮ್ಮ ಮತ ಚಲಾಯಿಸಿದರು.

ಸುಡು ಬಿಸಿಲನ್ನು ಲೆಕ್ಕಿಸದೆ ಹೆಚ್ಚಾಗಿ ಮಹಿಳೆಯರು ಸಾಲಿನಲ್ಲಿ ನಿಂತು ಮತದಾನ ಮಾಡಿದರು.

ಪ್ರತಿಯೊಂದು ಮತಗಟ್ಟೆಯಲ್ಲೂ ನೆರಳಿಗಾಗಿ ಶಾಮಿಯಾನ ವ್ಯವಸ್ಥೆ,ಹಾಗೂ ನೀರು ಗಾಳಿ ಬೆಳಕಿನ ವ್ಯವಸ್ಥೆಯನ್ನ ತಹಶಿಲಾರ್ ತಿರುಪತಿ ಪಾಟೀಲ್‌ಹಾಗೂಪುರಸಭೆಯಜಿ.ವಿ.ತಿಮ್ಮರಾಜು ಇವರುಗಳ ನೇತೃತ್ವದಲ್ಲಿ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು,

## ಕಾರ್ ವಾಹನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮತದಾರರ ಜಾಗೃತಿಗೆ ಚಾಲನೆ



» **ದಾವಣಗೆರೆ**

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯಿತಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಇವರು ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 26 ರಂದು ಕಾರ್‌ಗಳೊಂದಿಗೆ ಮತದಾರರ ಜಾಗೃತಿ ಮೂಡಿಸಲು ರ್‍ಯಾಲಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಹಸಿರು ನಿಶಾಲೆ ತೋರಿಸಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯಕ್, ತಾಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿ ಬಿ.ಎಂ.ಮಂಜುನಾಥ್, ಸಹಾಯಕ ನಿರ್ದೇಶಕ ರಾಮಬೋವಿ, ಹಾಗೂ ವಾಹನ ತರಬೇತಿ ಚಾಲಕರು ಇನ್ನಿತರರು ಉಪಸ್ಥಿತರಿದ್ದರು.

ಜಾಥಾವು ಆರ್.ಟಿ.ಓ ಕಚೇರಿಯಿಂದ ಯರಗುಂಟೆ, ಅವರಗೊಳ್ಳ, ಕಕ್ಕರಗೊಳ್ಳ, ಕಡ್ಲೇಬಾಳು, ಮಾಳಗೊಂಡನಹಳ್ಳಿ, ಬಿ.ಚಿತ್ತಾನಹಳ್ಳಿ, ಬೇತೂರು, ರಾಂಪುರ, ಶ್ರೀರಾಮನಗರ (ಆಲೂರುಹಟ್ಟಿ) ಮೆಳ್ಳೆಕಟ್ಟೆ, ಅಣಜಿ ಕ್ರಾಸ್, ಅಣಜಿ ಗ್ರಾಮ, ಅಣಜಿ ಕ್ರಾಸ್, ಕಂದನಕೋವಿ , ಆನ್‌ಗೋಡ್ ಮೂಲಕ ಪಾರ್ಕ್‌ನಲ್ಲಿ ಕೊನೆಗೊಂಡಿತು.

# ನಾಳೆ ಸಾಣೇಹಳ್ಳಿಯಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ರಥೋತ್ಸವ ಕಾರ್ಯಕ್ರಮ

**ಹೊಸದುರ್ಗ:** ತಾಲೂಕಿನ ಸಾಣೇಹಳ್ಳಿಯ ಶ್ರೀ ಶಿವಕುಮಾರ ಸ್ವಾಮೀಜಿ ರಥೋತ್ಸವ ಸಮಿತಿಯವರು ಪ್ರತಿವರ್ಷದಂತೆ ಏಪ್ರಿಲ್ 28 ರಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ರಥೋತ್ಸವವನ್ನು ಆಯೋಜಿಸಲಾಗಿದೆ. ಕಳೆದ ಹತ್ತಾರು ವರ್ಷಗಳಿಂದ ಈ ರಥೋತ್ಸವ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಜನ್ಮತಾಳಿದ ದಿನ ಏಪ್ರಿಲ್ 28 ರಂದೇ ಪ್ರತಿವರ್ಷ ನಡೆಯುವುದು. ಪ್ರತಿವರ್ಷ ತಾಲ್ಲೂಕಿನ ಬೇರೆ ಬೇರೆ ಗ್ರಾಮಗಳ ಭಕ್ತರು ರಥೋತ್ಸವದ ಜವಾಬ್ದಾರಿ ನಿರ್ವಹಿಸುವರು. ರಥೋತ್ಸದ ಸಂದರ್ಭದಲ್ಲಿ ಪುಸ್ತಕಗಳ ಹರಾಜು ನಡೆಯುವುದು. ನಂತರ ಗುರುಗಳಿಗೆ ಪ್ರಿಯವಾದ ವಚನಗೀತೆ, ನಾಟಕದ ಮೂಲಕ ಗುರುಗಳ ಸ್ಮರಣೆ ಅರ್ಥಪೂರ್ಣವಾಗಿ ನಡೆಯುವುದು. 2024 ಏಪ್ರಿಲ್ 28 ರ ಅಪರಾಹ್ನ 4 ಗಂಟೆಗೆ ರಥೋತ್ಸವ ಪೂಜ್ಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಮ್ಮುಖದಲ್ಲಿ ನಡೆಯುವುದು. ನಂತರ ಸಾರ್ವಜನಿಕ ಸಭೆ ಸಂಜೆ 5:30ಕ್ಕೆ ನಡೆಯಲಿದೆ. ಹೊಳಲ್ಕೆರೆಯ ಮಾಜಿ ಶಾಸಕ ಪಿ ರಮೇಶ್ ಗುರುವಂದನಾ ನುಡಿಗಳನ್ನಾಡುವರು. ಶಿವಸಂಚಾರ ಕಲಾವಿದರು ವಚನಗೀತೆಗಳನ್ನು ಹಾಡುವರು. ಗಾನ ಸಿದ್ಧಗಂಗಾ ಸಂಗೀತ ವಿದ್ಯಾಲಯ ಬೆಂಗಳೂರಿನ ಶ್ರೀಮತಿ ಗೀತಾ ಭತ್ತದ್ ಹಾಗೂ ತಂಡದವರಿಂದ ಸಂಗೀತ ಸುಧೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಶ್ರೀ ಶಿವಕುಮಾರ ಕಲಾಸಂಘದ ಹಿರಿಯ ಕಲಾವಿದರಿಂದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ರಚಿಸಿದ, ವೈ ಡಿ ಬದಾಮಿ ನಿರ್ದೇಶನದ 'ಮರಣವೇ ಮಹಾನವಮಿ' ನಾಟಕ ಪ್ರದರ್ಶನಗೊಳ್ಳಲಿದೆ.

## ಪ್ರಮುಖ ಸುದ್ದಿ

### ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ

# ದಾವಣಗೆರೆ: ನನ್ನಮತ, ನನ್ನ ಹಕ್ಕು ಮತದಾನ ಜಾಗೃತಿ

» **ದಾವಣಗೆರೆ**

ಮಲೇರಿಯಾ ಗಂಭೀರ ಮತ್ತು ಮಾರಣಾಂತಿಕ ಕಾಯಿಲೆಯಾಗಿದ್ದರೂ, ಇದನ್ನು ಗುಣಪಡಿಸಿ ತಡೆಗಟ್ಟಬಹುದು. ಅನಾಫೀಲಿಸ್ ಸೊಳ್ಳೆ ಕಡಿತದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದೇ ಆರಂಭಿಕ ಚಿಕಿತ್ಸೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಸ್ವೀಟ್ ಸಮಿತಿ ಅಧ್ಯಕ್ಷರಾದ ಸುರೇಶ್ .ಬಿ. ಇಟ್ನಾಳ್ ತಿಳಿಸಿದರು.

ಅವರು ಶುಕ್ರವಾರ (26)ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಲೇರಿಯಾದಿಂದ ಬಳಲುತ್ತಿರುವ ಮತ್ತು ಇದರಿಂದ ಮರಣ ಪ್ರಮಾಣ ಇಳಿಕೆ ಮಾಡಲು ಜಾಗತಿಕ ಗಮನ ಸೆಳೆಯಲು ಪ್ರತಿ ವರ್ಷ ಏಪ್ರಿಲ್ 25 ರಂದು ವಿಶ್ವ ಮಲೇರಿಯಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ವರ್ಷ ಹೆಚ್ಚು ಸಮಾನತೆ ಜಗತ್ತಿಗೆ, ಮಲೇರಿಯಾ ವಿರುದ್ದ ಹೋರಾಟವನ್ನು ತೀವ್ರಗೊಳಿಸೋಣ ಎಂಬ ಘೋಷದಡಿ ಆಚರಣೆ ಮಾಡಲಾಗುತ್ತಿದೆ.



ಹೆಣ್ಣು ಅನಾಫಿಲಿಸ್ ಸೊಳ್ಳೆಯಿಂದ ಮಲೇರಿಯಾ ಹರಡುತ್ತದೆ, ಮಲೇರಿಯಾ ಜ್ವರ ಹೆಚ್ಚಾಗಿ ಬೇಸಿಗೆ ಮತ್ತು ಮಳೆಗಾಲದಲ್ಲಿ ಕಂಡುಬರುತ್ತದೆ. ಅನಾಫಿಲಿಸ್ ಸೊಳ್ಳೆ ಕಚ್ಚಿದ ತಕ್ಷಣ ಪರಾವಲಂಭಿ ರೋಗಿಯ ಯಕೃತ್ತು ಮತ್ತು ರಕ್ತ ಕಣಗಳ ಮೇಲೆ ದಾಳಿ ಮಾಡುತ್ತದೆ. ಸೊಳ್ಳೆ ಕಡಿತದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದರು.

ಜಾಥಾದಲ್ಲಿ ಮತದಾನ ಜಾಗೃತಿ; ಮಲೇರಿಯಾ ಜಾಥಾ ವೇಳೆ ಮತದಾನಕ್ಕೆ ಸಂಬಂಧಿಸಿದ ಘೋಷ ವಾಕ್ಯಗಳ ಪ್ಲೆಕಾರ್ಡ್‌ಗಳನ್ನು ಹಿಡಿದು ಪ್ರದರ್ಶನ ಮಾಡುವ ಮೂಲಕ ಮತದಾನದ ಮಹತ್ವ ತಿಳಿಸಲಾಯಿತು. ಪ್ರತಿ ಮತ ಅಮೂಲ್ಯ, ತಪ್ಪದೇ ಮತ ಚಲಾಯಿಸಿ, ನಾನು ಮತ್ತು ನನ್ನ ಮತ ಮಾರಾಟಕ್ಕಿಲ್ಲ, ನನ್ನ ಮತ ನನ್ನ ಧ್ವನಿ ನನ್ನ ಶಕ್ತಿ ನಿಮ್ಮ ಮತ ಅಮೂಲ್ಯ, ಕಡ್ಡಾಯವಾಗಿ ಮತದಾನ ಮಾಡಿ, ಯಾವುದೇ ಆಮಿಷ, ಬೆದರಿಕೆಗೆ ಮಣಿಯದೇ ತಪ್ಪದೇ ಮತ ಚಲಾಯಿಸಿ, ಯಾವುದೇ ಮತದಾರ ಮತದಾನದಿಂದ ಹೊರಗೊಳಿಯಬಾರದು ಎಂಬ ಘೋಷಾವಾಕ್ಯಗಳೊಂದಿಗೆ ಮತದಾನದ ಪಟಗಳನ್ನು ಹಿಡಿದು ಮತದಾನ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಷಣ್ಮುಖಪ್ಪ , ಜಿಲ್ಲಾ ಮಲೇರಿಯಾ ನಿರ್ಮೂಲನಾಧಿಕಾರಿ ಡಾ. ಗಂಗಾಧರ್, ಆರ್.ಸಿ.ಎಚ್.ಓ. ಡಾ.ರೇಣುಕಾ ಆರಾಧ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಸುರೇಶ್ ಬಾರ್ಕಿ, ಸರ್ವಲೆನ್ಸ್ ಅಧಿಕಾರಿ ಡಾ. ರಾಘವನ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ವಿವಿಧಕಾಲೇಜಿನವಿದ್ಯಾರ್ಥಿನಿಯರುಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಮದುವೆ ಮಂಟಪದಲ್ಲಿ ಮತದಾನ ಜಾಗೃತಿ



» **ದಾವಣಗೆರೆ**

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು ಮತದಾರರು ತಪ್ಪದೇ ಮತಗಟ್ಟೆಗೆ ಬಂದು ಮತದಾನ ಮಾಡಲು ಹನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಿಲಕ್ಕೇನಹಳ್ಳಿ ಗ್ರಾಮದಲ್ಲಿ ನಡೆದ ಮದುವೆ ಮಂಟಪದಲ್ಲಿ ನವ ದಂಪತಿಗಳಿಗೆ ಮತ್ತು ವಧು, ವರನ ಕಡೆಯವರಿಗೆ ರೇಷ್ಮೆ ಇಲಾಖೆಯಿಂದ ಏಪ್ರಿಲ್.26 ರಂದು ಮತದಾನ ಜಾಗೃತಿ ಮೂಡಿಸಲಾಯಿತು. ಇದಕ್ಕೂ ಮೊದಲು ಕರಿಲಕ್ಕೇನಹಳ್ಳಿ ಗ್ರಾಮದ ಪ್ರಮುಖ ಬೀದಿನಗಳಲ್ಲಿ ಮತದಾನ ಜಾಗೃತಿ ಮೂಡಿಸಿ ಮದುವೆ ಮಂಟಪದಲ್ಲಿ ನೆರೆದಿದ್ದ ಜನರಿಗೆ ಮತದಾನ ಪ್ರತಿಜ್ಞಾವಿಧಿ ಬೋಧಿಸಿದರು. ಈ ವೇಳೆ ರೇಷ್ಮೆ ಉಪನಿರ್ದೇಶಕರು ಪಿ.ಎಲ್.ಚಂದ್ರಪ್ಪ, ಸಹಾಯಕ ನಿರ್ದೇಶಕ ರೇಷ್ಮೆ ಎಸ್.ಎ.ಶೀಹರ್ಷ, ಪಿಡಿಓ ನಾಗರಾಜ್, ಆರ್.ಎಫ್.ಓ ಶರಣಪ್ಪ, ರೇಷ್ಮೆ ಬೆಳೆಗಾರರ ನಾಗರಾಜಪ್ಪ, ಶಿವಣ್ಣ, ಮಲ್ಲಿಕಾರ್ಜುನಪ್ಪ ಹಾಗೂ ಕರೆಲಕ್ಕೇನಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

### ದಾವಣಗೆರೆ ಸಂತೆ ನಿಷೇಧ

» **ದಾವಣಗೆರೆ**

ಲೋಕಸಭಾ ಚುನಾವಣಾ ರ್ಯಾಲಿಯಲ್ಲಿ ಭಾಗವಹಿಸಲು ಏಪ್ರಿಲ್ 28 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದಾವಣಗೆರೆಗೆ ಆಗಮಿಸುತ್ತಿದ್ದು ಈ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಅಂದು ನಡೆಯುವ ದಾವಣಗೆರೆ ಸಂತೆಯನ್ನು ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

### ೩೦ ರಂದು ಹಿರಿಯ ನಾಗರಿಕರಿಂದ ಮತದಾನ ಜಾಗೃತಿ ಆಂದೋಲನ

» **ದಾವಣಗೆರೆ**

ಲೋಕಸಭಾ ಚುನಾವಣಾ ಅಂಗವಾಗಿ ಹಿರಿಯ ನಾಗರಿಕರೆಲ್ಲರೂ ಮತದಾನ ಮಾಡುವಂತಾಗಲು ಜಾಗೃತಿ ಮೂಡಿಸಲು ಏಪ್ರಿಲ್ 30 ರಂದು ಬೆಳಗ್ಗೆ 8 ಗಂಟೆಗೆ ದಾವಣಗೆರೆ ನಗರದ ಎಂಸಿಸಿ ಬಿ.ಬ್ಲಾಕ್ ಚಿಲ್ಡ್ರನ್ ಪಾರ್ಕ್‌ನಿಂದ ಗುಂಡಿ ಸರ್ಕಲ್ ವರೆಗೆ ಹಿರಿಯ ನಾಗರಿಕರಿಂದ ಮತದಾನ ಜಾಗೃತಿ ಜಾಥಾ ಏರ್ಪಡಿಸಲಾಗಿದೆ. ಅಂದು ಹಿರಿಯ ನಾಗರಿಕರು ಜಾಥಾದಲ್ಲಿ ಭಾಗವಹಿಸಬೇಕೆಂದು ಜಿಲ್ಲಾ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ಕಲ್ಯಾಣಾಧಿಕಾರಿ ಡಾ; ಕೆ.ಕೆ.ಪ್ರಕಾಶ್ ತಿಳಿಸಿದ್ದಾರೆ.

### ತಾಲ್ಲೂಕಿನಿಂದ ತಾಲ್ಲೂಕಿಗೆ ತೆರಳಲು ಬಸ್ ವ್ಯವಸ್ಥೆ

» **ದಾವಣಗೆರೆ**

ಲೋಕಸಭಾ ಚುನಾವಣಾ ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಏಪ್ರಿಲ್ 30 ರಂದು ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಎರಡನೇ ಹಂತದ ತರಬೇತಿ ನಡೆಯುತ್ತಿದೆ. ಈ ವೇಳೆ ತರಬೇತಿಗೆ ನಿಯೋಜಿತರಾದ ತಾಲ್ಲೂಕುಗಳಿಗೆ ತೆರಳಲು ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಮಸ್ಟರಿಂಗ್ ಸ್ಥಳದಿಂದ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ. ಎಲ್ಲಾ ತಾಲ್ಲೂಕುಗಳಿಂದ 82 ಬಸ್‌ಗಳು ಕಾರ್ಯಾಚರಣೆ ನಡೆಸಲಿದ್ದು ಒಂದು ತಾಲ್ಲೂಕಿನಿಂದ ಬೇರೆ ಎಲ್ಲಾ ತಾಲ್ಲೂಕುಗಳಿಗೂ ಬಸ್‌ಗಳ ಸಂಚರಿಸಲಿವೆ. ಜಗಳೂರಿನಿಂದ ಬೇರೆ ತಾಲ್ಲೂಕುಗಳಿಗೆ 13 ಬಸ್ ಹೊರಡಲಿದ್ದು ಇಲ್ಲಿಗೆ ಬೇರೆ ತಾಲ್ಲೂಕುಗಳಿಂದ 16 ಬರಲಿವೆ. ಹರಿಹರದಿಂದ 13 ಹೊರಡಲಿದ್ದು 11 ಬರಲಿವೆ, ದಾವಣಗೆರೆ ಉತ್ತರ 11 ಹೋಗಲಿದ್ದು 9 ಬರಲಿವೆ, ದಕ್ಷಿಣ 4 ಹೊರಡಲಿದ್ದು 9 ಬಸ್‌ಗಳು ಬರಲಿವೆ. ಮಾಯಕೊಂಡ ಕ್ಷೇತ್ರ 9 ಬಸ್‌ಗಳು ಹೊರಡಲಿದ್ದು 10 ಬರಲಿವೆ. ಚನ್ನಗಿರಿ 16 ಬಸ್ ಹೊರಡಲಿದ್ದು 14 ಬರಲಿವೆ. ಹಾಗೂ ಹೊನ್ನಾಳಿಯಿಂದ 16 ಬಸ್‌ಗಳು ಹೊರಡಲಿದ್ದು 13 ಬೇರೆ ತಾಲ್ಲೂಕುಗಳಿಂದ ಇಲ್ಲಿಗೆ ಬರಲಿವೆ. ತರಬೇತಿಗೆ ನಿಯೋಜಿತರಾದ ಅಧಿಕಾರಿಗಳು, ಸಿಬ್ಬಂದಿಗಳು ನಿಯೋಜಿತ ತಾಲ್ಲೂಕುಗಳಿಗೆ ತೆರಳಲು ಬೆಳಗ್ಗೆ 8 ಗಂಟೆಯೊಳಗಾಗಿ ಆಯಾ ತಾಲ್ಲೂಕಿನಲ್ಲಿ ಗುರುತಿಸಲಾದ ಸ್ಥಳದಲ್ಲಿರಲು ತಿಳಿಸಲಾಗಿದೆ.

### ಜಾತ್ರೆ ನಿಷೇಧ

» **ದಾವಣಗೆರೆ**

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದ್ದು ಅಂದು ಜಿಲ್ಲೆಯಲ್ಲಿ ನಡೆಯುವ ಎಲ್ಲಾ ಜಾತ್ರೆ, ಸಂತೆಗಳನ್ನು ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ. ಜಗಳೂರು ತೌಡೂರು ಗ್ರಾಮದಲ್ಲಿ ವಾರದ ಸಂತೆ, ಬಿಳಿಚೋಡು ಪಾರ್ಶ್ವನಾಥ ರಥೋತ್ಸವ, ಪಲ್ಲಾಗಟ್ಟೆ, ಗುರುಸಿದ್ದಾಪುರದೆ, ಹರಿಹರ ನಗರ, ಮಹಜೇನಹಳ್ಳಿ ಗ್ರಾಮ ವಾರದ ಸಂತೆ, ಚನ್ನಗಿರಿ ತಾ; ಪಾಂಡೋಮಟ್ಟಿ ಗ್ರಾಮದಲ್ಲಿ ನಡೆಯುವ ವಾರದ ಸಂತೆ, ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಾಸ್ವೆಹಳ್ಳಿ, ಕೂಲಂಬಿ ಗ್ರಾಮದಲ್ಲಿ ನಡೆಯುವ ವಾರದ ಸಂತೆ ನಿಷೇಧಿಸಲಾಗಿದೆ.

# ಹೊಳಲ್ಕೆರೆ: ಮತದಾನ ಬಹುತೇಕ ಶಾಂತಿಯುತ

» **ಎಸ್.ವೇದಮೂರ್ತಿಹೊಳಲ್ಕೆರೆ**





ಪಟ್ಟಣದ ಒಂದೆರಡು ಮತಗಟ್ಟೆಗಳಲ್ಲಿ ಮುಂಜಾನೆ ಮತಯಂತ್ರ ದೋಷ ಕಂಡಿದ್ದು, ಹೊರತುಪಡಿಸಿದರೆ ಶುಕ್ರವಾರ ನಡೆದ ಲೋಕಸಭೆ ಚುನಾವಣೆ ಹೊಳಲ್ಕೆರೆ ಕ್ಷೇತ್ರದ 299 ಮತಕಟ್ಟೆಯಲ್ಲಿ ಮತದಾನ ಬಹುತೇಕ ಶಾಂತಿಯುತವಾಗಿತ್ತು.

ಬಿಸಿಲು ಹೆಚ್ಚಾದರೇ ಮತದಾನಕ್ಕೆ ಹೋಗುದು ಕಷ್ಟ, ಸಂಜೆ ಮಳೆ ಬಂದರೇ ಮತದಾನ ಮಾಡುವುದು ಕಷ್ಟ ಎನ್ನುವ ಉದ್ದೇಶದಿಂದಾಗಿ ಪಟ್ಟಣದ ವೃದ್ದರು, ವಿಕಲಾಂಗರು, ಮಹಿಳೆಯರು ಮುಂಜಾನೆಯಿಂದಲೇ ಮತಗಟ್ಟೆ ಬಂದು ಮತ ಚಲಾಯಿಸಿದ್ದರೇ, ಕೃಷಿಕರು, ಕೂಲಿ ಕಾರ್ಮಿಕರು, ಉದ್ಯೋಗಿಗಳು ಹುರಿಯುವ ಬಿಸಿಲಿನಲ್ಲಿಯೂ ಸಂಜೆ 6 ತನಕ ಮತಕಟ್ಟೆಗೆ ಬಂದು ತಮ್ಮ ಹಕ್ಕು ಚಲಾಯಿಸಿದರು. ದೂರದ ಊರುಗಳಿಂದ ಆಗಮಿಸಿದ ವಿವಿಧ ಕ್ಷೇತ್ರದ ಉದ್ಯೋಗಿಗಳು ಸುಡು ಬಿಸಿಲಿನಲ್ಲಿ ಮತಗಟ್ಟೆಯಲ್ಲಿ ನಿಂತು ಮತದಾನ ಮಾಡಿದರು. ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಜನರು ಬೆಳಿಗ್ಗೆ ಯಿಂದ ಸಂಜೆ ತನಕ ಮತಕಟ್ಟೆಗೆ ಆಗಮಿಸಿ ಮತದಾನ ಮಾಡಿದರು.

**ಮತದಾರರ ಮಾಹಿತಿ ಚೀಟಿಯ ಸಂಖ್ಯೆಗೆ ಪರದಾಟ:** ಪಟ್ಟಣದ ಸೇರಿದಂತೆ ತಾಲೂಕಿನ ವಿವಿಧ ಕಡೆಗಳಲ್ಲಿ ಚುನಾವಣೆ ಆಯೋಗದಿಂದ ಮತದಾರರ ಮಾಹಿತಿ ಚೀಟಿಯನ್ನು ಮತದಾರರಿಗೆ ಹಂಚಿಕೆ ಮಾಡಬೇಕಿದ್ದು, ಸಿಬ್ಬಂದಿ ಕೆಲವಡೆ ವಿತರಣೆ ಮಾಡಿಲ್ಲ. ಇದು ಮತದಾರರು ಮತಕಟ್ಟೆಯಲ್ಲಿ ಮತದಾನ ಮಾಡಲು ಕ್ರಮ ಸಂಖ್ಯೆಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ದೂರದ ಊರಿಗಳಿಂದ ಬಂದವರೂ ಗಂಟೆಗಟ್ಟಲೆ ಮತಕಟ್ಟೆಯಲ್ಲಿ ಕುಳಿತು ಕ್ರಮ ಸಂಖ್ಯೆಯನ್ನು ಹುಡಿಕಿಕೊಳ್ಳಬೇಕಿತ್ತು. ಇದರಿಂದ ಸಾರ್ವಜನಿಕರು ಮತದಾರರ ಮಾಹಿತಿ ಚೀಟಿ ವಿತರಿಸದ ಸಿಬ್ಬಂದಿ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

**ಚುನಾವಣೆ ಜಾಗೃತಿ ಇಲ್ಲ:** ಕ್ಷೇತ್ರದ ಬಹುತೇಕ ಹಳ್ಳಿ, ಕುಗ್ರಾಮಗಳಲ್ಲಿ ಲೋಕಸಭಾ ಚುನಾವಣೆ ಜಾಗೃತಿ ಇಲ್ಲ. ಚುನಾವಣೆ ಕುರಿತು ಸರಕಾರ ಹಾಗೂ ಅಭ್ಯರ್ಥಿಗಳು ಜನರನ್ನು ತಲುಪಿಲ್ಲ. ಇದರಿಂದಾಗಿ ಲೋಕಸಭಾ ಚುನಾವಣೆ ಇದೆ ಎನ್ನುವ ಮಾಹಿತಿ ಇಲ್ಲ. ಹಾಗಾಗಿ ಜನರು ಯಾವ ಚುನಾವಣೆ ಎನ್ನುವ ಪ್ರಶ್ನೆ ಕೇಳುತ್ತಿದ್ದು ಕಂಡು ಬಂತು.

**85 ಅಗಿದ್ದರೂ ಮತಗಟ್ಟೆಗೆಯಲ್ಲಿ ಮತದಾನ.**

ಚುನಾವಣಾ ಆಯೋಗ 85 ವರ್ಷ ಮೇಲ್ಪಟ್ಟ ಮತ್ತು ವಿಕಲಚೇತನರಿಗೆ ಮನೆಯಲ್ಲೇ ವೋಟಿಂಗ್ ಮಾಡುವ ಅವಕಾಶ ಕಲ್ಪಿಸಿದ್ದರೂ ಪಟ್ಟಣದ 90 ವರ್ಷ ಕೆ.ಎಸ್.ಸಿದ್ದಪ್ಪ, 91 ವರ್ಷ ವಾಸುದೇವಮೂರ್ತಿ ಸೇರಿ ಹಲವಾರು ವೃದ್ದರು ಕುಟುಂಬದವರ ಜತೆ ಮನೆಯಿಂದ ನಡೆದುಕೊಂಡು ಬಂದೇ ಮತದಾನ ಮಾಡಿದರು.

**ನೂರಕ್ಕು ಹೆಚ್ಚು ಮತಗಟ್ಟೆಯಲ್ಲಿ ಬಿಜೆಪಿ ಪಕ್ಷದ ಏಜಂಟರಿಲ್ಲ:** ಪಟ್ಟಣದ 9 ಮತಕಟ್ಟೆ ಹಾಗೂ ಕ್ಷೇತ್ರ ನೂರಕ್ಕು ಹೆಚ್ಚು ಮತಗಟ್ಟೆಯಲ್ಲಿ ಬಿಜೆಪಿ ಪಕ್ಷದಿಂದ ಚುನಾವಣೆ ಏಜಂಟರಿಲ್ಲದ್ದು ಕಂಡು ಬಂತು. ಮುಸ್ಲೀಂ ಹಾಗೂ ಪ.ಪಜಾತಿ ಹಟ್ಟಿಗಳ ಮತಗಟ್ಟೆಯಲ್ಲಿ ಬಿಜೆಪಿ ಪಕ್ಷ ಏಜಂಟರಿಲ್ಲದ್ದು ಕಂಡು ಬಂತು.

# ಬೆಳೆವಿಮೆ ಪರಿಹಾರ ವಿತರಣೆಯಲ್ಲಿ ತಾರತಮ್ಯ: ಮೇ3ಕ್ಕೆ ತಾಲೂಕು ಕಚೇರಿ ಮುಂದೆ ಪ್ರತಿಭಟನೆ

» **ಪರಶುರಾಂಪುರ**



ಗ್ರಾಮದ ರೈತರ ತೋಟದಲ್ಲಿ ಗುರುವಾರ ಆಯೋಜಿಸಿದ್ದಾ ಅಖಂಡ ಕರ್ನಾಟಕ ರಾಜ್ಯ ರೈತಸಂಘದ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ 2023-24ನೇ ಸಾಲಿನ ಬೆಳೆವಿಮೆ ವಿತರಣೆಯಲ್ಲಿ ಪರಶುರಾಂಪುರ ಹೋಬಳಿ ಸೇರಿದಂತೆ ತಾಲೂಕಿನ ರೈತರಿಗೆ ತಾರತಮ್ಯ ಮಾಡಿರುವುದನ್ನು ಖಂಡಿಸಿ ಮೇ.03ರಂದು ತಾಲೂಕು ಕಚೇರಿಯ ಮುಂದೆ ಬೃಹತ್ ರೈತರ ಪ್ರತಿಭಟನೆ ನಡೆಸಲು ನಿರ್ಣಯಿಸಲಾಯಿತು.

ಸಂಘದ ತಾಲೂಕಧ್ಯಕ್ಷ ಕೆ.ಚಿಕ್ಕಣ್ಣ ಮಾತನಾಡಿ,ಬೆಳೆವಿಮೆ ಯೋಜನೆ ಅವೈಜ್ಞಾನಿಕವಾಗಿದೆ. ಭೌಗೋಳಿಕವಾಗಿ ವಾಡಿಕೆ ಮಳೆ ಇಲ್ಲದೆ ಬರಪೀಡಿತ ಎಂದು ಘೋಷಣೆ ಮಾಡಿರುವ ತಾಲೂಕಿನಲ್ಲಿ ಬೆಳೆವಿಮೆಯಲ್ಲಿ ಮೋಸ ಮಾಡಲಾಗಿದೆ. ಬಿತ್ತಿದ ರೈತನಿಗೆ ಬೆಳೆವಿಮೆ ಸಿಕ್ಕಿಲ್ಲ. ಬೀಳು ಬಿಟ್ಟಿರುವ ರೈತನಿಗೆವಿಮೆ ಹಣ ಬಂದಿದೆ. ಗ್ರಾಮ ಲೆಕ್ಕಾಧಿಕಾರಿ,ಕೃಷಿ ಇಲಾಖೆ ಅಧಿಕಾರಿ ಮತ್ತು ಕಂಪ್ಯೂಟರ್‌ಎಂಟ್ರಿ ಮಾಡುವ ಸಿಬ್ಬಂದಿಯ ನಿರ್ಲಕ್ಷ್ಯದಿಂದ ರೈತರಿಗೆ ಮೋಸವಾಗಿದೆ.ಕಂದಾಯ,ಕೃಷಿ ಮತ್ತು ತೋಟಗಾರಿಕೆ ಇಲಾಖೆ ಜಂಟಿಯಾಗಿ ನಡೆಸಿರುವ ಆಲಿಕಲ್ಲು ಮಳೆಗೆ ಬೆಳೆ ನಷ್ಟ,ವೇದಾವತಿ ಪ್ರವಾಹದಿಂದ 200 ಹೆಕ್ಟರ್ ಬೆಳೆ ನಷ್ಟ ಮತ್ತು ಬಿರುಗಾಳಿಗೆ ಅಡಕೆ, ತೆಂಗು, ಬಾಳೆ ಬೆಳೆ ಕಳೆದುಕೊಂಡ 150 ರೈತರಿಗೆ ಇದುವರೆಗೂ ಪರಿಹಾರ ಸಿಕ್ಕಿಲ್ಲ. ಈ ಬೆಳೆ ನಷ್ಟ ಸಮೀಕ್ಷೆ ನಡೆಸಿರುವ ಅಧಿಕಾರಿಗಳಿಂದ ರೈತರಿಗೆ ಹಿಂಬರಹವಾದರೂ ನೀಡಬೇಕು.

ಕೋರ್ಟಿಗಾದರೂ ಹೋಗಿ ಕಾನೂನು ಹೋರಾಟ ಮಾಡುತ್ತೇವೆ. ಬೆಳೆ ವಿಮೆ ಕಟ್ಟಿಸಿಕೊಳ್ಳುವಾಗ ಕಾಳಜಿ ತೋರಿಸುವ ಅಧಿಕಾರಿಗಳು ಬೆಳೆವಿಮೆ ಕೊಡಿಸಲುಆಸಕ್ತಿ ತೋರಿಸುವುದಿಲ್ಲ. ವಿಮಾ ಕಂಪನಿಗಳ ಮೋಸದಾಟಕ್ಕೆರೈತರು ಬಲಿಯಾಗುತ್ತಿದ್ದೇವೆ. ಸಂಕಷ್ಟದಲ್ಲಿರುವರೈತರಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಬೇಕು. ಬೆಳೆವಿಮೆ ತಾರತಮ್ಯ ಸರಿಪಡಿಸಿ ತಾಲೂಕಿನ ಎಲ್ಲಾರೈತರಿಗೆನ್ಯಾಯಕೊಡಿಸಬೇಕು. 40 ಗ್ರಾಮ ಪಂಚಾಯಿತಿಗಳ ರೈತರಿಗೆ ಸಮಾನ ಬೆಳೆವಿಮೆ ಮತ್ತು ಪರಿಹಾರ ವಿತರಣೆಗೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು.ಇಲ್ಲದಿದ್ದಲ್ಲಿ ಬೃಹತ್ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದ್ದಾರೆ.ಸಂಘದ ಪ್ರಧಾನ ಕಾರ್ಯದರ್ಶಿ ಚೌಳೂರು ಪ್ರಕಾಶ ಮಾತನಾಡಿ, ಹವಾಮಾನ ವೈಪರೀತ್ಯದಿಂದ ವಾರ್ಷಿಕ ವಾಡಿಕೆ ಮಳೆಯೂ ಬರುತ್ತಿಲ್ಲ. ಇದರಿಂದ ಕೃಷಿ ಬೆಳೆಗಳು ರೈತರಿಗೆ ಧಕ್ಕುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರಿಗೆ ಆರ್ಥಿಕ ಭದ್ರತೆ ಬೆಳೆವಿಮೆ ಯೋಜನೆಯಿಂದ ಉಪಯೋಗವಿದೆ. ಸಮೀಕ್ಷೆ ನಡೆಸುವ ಹಂತದಲ್ಲೆ ಅರ್ಹ ರೈತರ ಜಮೀನು ಮತ್ತು ಬೆಳೆಯ ನಿರ್ಧಿಷ್ಟತೆ‌ನಮೂದು ಮಾಡಬೇಕು. ಕೆಲ ಭಾಗದ ಸಮೀಕ್ಷೆ ಆಧರಿಸಿ ತಾಲೂಕಿ ನಒಟ್ಟಾರೆ ಪರಿಸ್ಥಿತಿಯನ್ನು ಅಳತೆಗೋಲಾಗಿ ಮಾಡಬಾರದು. ಪ್ರಸ್ತುತ ಬೆಳೆವಿಮೆ ವಿತರಣೆಯಲ್ಲಿ ನಿರ್ಧಿಷ್ಟ ರೈತರ ಜಮೀನುಗಳ ನಡುವೆಯೇ ತಾರತಮ್ಯವಾಗಿದೆ. ಇದನ್ನು ಕೂಡಲೇ ಕಂದಾಯ ಇಲಾಖೆ ಮತ್ತು ವಿಮಾ ಕಂಪನಿ ಅಧಿಕಾರಿಗಳು ಸರಿಪಡಿಸಬೇಕು ಎಂದಿದ್ದಾರೆ. ಸಭೆಯಲ್ಲಿ ಶಾಂತಣ್ಣ, ನವೀನ್‌ಗೌಡ, ಜಂಪಣ್ಣ, ಎಚ್. ಪ್ರಕಾಶ, ಹನುಮಂತರಾಯಪ್ಪ,ಖಾದರ್ ಭಾಷ್, ಅಣ್ಣಪ್ಪ, ರಾಜು, ನಾರಾಯಣಪ್ಪ, ರಾಜಣ್ಣ, ಪರಮೇಶ್ವರಪ್ಪ, ತಿಪ್ಪೇಸ್ವಾಮಿ, ಮಂಜುನಾಥ ಇದ್ದರು.

## ಚಿತ್ರಕಲಾ ಶಿಕ್ಷಕರಿಂದ 50 ಮೀಟರ್ ಬಟ್ಟೆಯಲ್ಲಿ ಮತದಾನ ಜಾಗೃತಿ



» **ದಾವಣಗೆರೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಗಳ ವತಿಯಿಂದ ಏರ್ಪಡಿಸಲಾಗಿದ್ದ 50 ಮೀಟರ್ ಬಟ್ಟೆಯ ಮತದಾನ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುರೇಶ್ ಬಿ ಇಟ್ನಾಳ್ ಉದ್ಘಾಟಿಸಿ ಚಿತ್ರಗಳನ್ನು ವೀಕ್ಷಿಸಿದರುಮತದಾನ ಜಾಗೃತಿ ಬಟ್ಟೆಯಲ್ಲಿ ಆಸೆಗೆ ಬಲಿಯಾಗದಿರಿ ನಿಮ್ಮ ಮತ ಪವಿತ್ರವಾಗಿರಲಿ, ಆಮಿಷಕ್ಕೆ ಒಳಗಾಗದೆ ನಿಮ್ಮ ಅಮೂಲ್ಯವಾದ ಮತ ಹಾಳು ಮಾಡದೆ ಒಳ್ಳೆಯದನ್ನು ಯೋಚನೆ ಮಾಡಿ ಮತ ಚಲಾಯಿಸಿ, ನೀವೆಲ್ಲಾ ಪ್ರಜ್ಞಾವಂತರಿದ್ದೀರಿ ಆಮಿಷಕ್ಕೆ ಮಾರುಹೋಗದೆ ಯೋಚನೆ ಮಾಡಿ ಮತ ಹಾಕಿರಿ, ಭ್ರಷ್ಟರ ಮುಂದೆ ಬೇಡುವಿರೇಕೆ ಮತ ಹಾಕಿ ಭ್ರಷ್ಟರನ್ನ ಸೋಲಿಸಿ, ನನ್ನ ಮತ ನನ್ನ ಹಕ್ಕು, 85 ವರ್ಷ ಮೇಲ್ಪಟ್ಟ ವಯೋವೃದ್ಧರಿಗೆ ಮನೆಯಲ್ಲಿ ಮತದಾನ, ಪ್ರಥಮ ಕರ್ತವ್ಯ ಮತ ಚಲಾಯಿಸೋಣ ಬನ್ನಿ, ಮತದಾನಕ್ಕಾಗಿ ರಜಾ ಮಜಾ ಮಾಡಲು ಅಲ್ಲ, ಸುಭದ್ರತೆ ಸರ್ಕಾರ ರಚನೆಗೆ ನಿಮ್ಮ ಪವಿತ್ರ ಮತ ಸಾಕ್ಷಿಯಾಗಲಿ, ಕ್ರಿಕೆಟ್ ನೋಡೋದು ಬಿಟ್ಟು ಮತ ಹಾಕೋಣ ಬನ್ನಿ, ಚುನಾವಣೆಗಳಲ್ಲಿ ಆಮಿಷಕ್ಕೆ ಒಳಗಾಗಬೇಡಿ, ಜ್ಞಾನಕ್ಕಾಗಿ ಶಿಕ್ಷಣ ಪ್ರಜಾಪ್ರಭುತ್ವಕ್ಕಾಗಿ ಮತದಾನ ಎಂಬ ಘೋಷವಾಕ್ಯಗಳು 15 ಚಿತ್ರಕಲಾ ಶಿಕ್ಷಕರರಿಂದ ಸುಮಾರು 100 ಚಿತ್ರಗಳ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತುಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್ ಜಿ, ಡಯಟ್ ಪ್ರಾಚಾರ್ಯರು ಗೀತಾ, ಡಯಟ್ ಉಪನ್ಯಾಸಕರು ಮತ್ತು ಸಿಬ್ಬಂದಿಯ ಬಳಗ ಜಿಲ್ಲೆಯ ಚಿತ್ರಕಲಾ ಶಿಕ್ಷಕರು ಹಾಗೂ ಇನ್ನಿತರರು ಉಪಸ್ಥಿತರಿದ್ದರು




Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T